ಲಘುಬರಹಮಾಲೆ---೨.

ವಿಶ್ವಬಂಧು ನೆಹರು.



ಬರೆದವರು:

ಕೋಟ ಸುಬ್ರಾಯ ಉರಾಳ, ಕುಂದಾಪುರ.

ಸಂಪಾದಕೀಯ

ವಿಶ್ವಬಂಧು ನೆಹರು ನಮ್ಮ ಲಘು ಬರಹ ಮಾಲೆಯ ಎರಡನೆ ಬರಹ. ಚುನಾವಣೆಯ ನಿಮಿತ್ತ ಕೊಂಚ ತಡೆದು ಪ್ರಕಟಿಸಲಾಗಿದೆ. ಓದುಗರೆಲ್ಲ ಮನ್ನಿಸುವರು ಎಂದು ನಂಬಿರುತ್ತೇವೆ.

ವಿಶ್ವಬಾಂಧವ್ಯವನ್ನು ಕೋರುವ ನೆಹರುಗಳ ವಿದೇಶನೀತಿಯ ತಳಹದಿ ಏನು ಎಂಬುದನ್ನು ವಿವೇಚಿಸುವುದು ಈ ಬರಹದ ಮುಖ್ಯ ಉದ್ದೇಶ. ಆ ತಳಹದಿಯನ್ನು ಹೊಂದಿಕೊಂಡು ನೆಹರುಗಳು ತಮ್ಮ ವಿದೇಶನೀತಿಯನ್ನು ಹೇಗೆ ರೂಪಿಸಿಕೊಂಡಿದ್ದಾರೆ ಎಂಬುದನ್ನು ಬರಹದ ಕೊನೆಗೆ ನಿರೂಪಿಸಲಾಗಿದೆ. ದೇಶವಿದೇಶಗಳೆಲ್ಲ ನಿರ್ವಾಹವಿಲ್ಲದೆ ಒಂದಕ್ಕೊಂದು ಹೊಸೆದುಕೊಂಡು ಹೋಗುತ್ತಿರುವ ಇಂದಿನ ಈ ವಿಜ್ಞಾನ ಯುಗದಲ್ಲಿ, ಒಂದು ರಾಷ್ಟ್ರದ ವಿದೇಶ ನೀತಿಯನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ ಎಂದು ಮನಗಂಡು ಈ ಬರಹವನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಿದ್ದೇವೆ.

ವಿಷಯವು ಪ್ರೌಢ ಮತ್ತು ಅಗಾಧ. ಅದಕ್ಕನುಗುಣವಾಗಿ ಭಾಷೆಯು ಗಡುಸಾಗಿ ಮತ್ತು ಮಿತಿಯು ವಿಸ್ತೃತವಾಗಿ ಪರಿಣಮಿಸುವುದು ಸಹಜ. ಆದರೂ ಸರಳವಾಗಿ ಮತ್ತು ಸಂಕ್ಷೇಪವಾಗಿ ನಿರೂಪಿಸಲು ಯತ್ನಿಸಿಯದೆ. ನಮ್ಮ ಈ ಬರಹವು ಪರರಾಷ್ಟ್ರಗಳ ಕಡೆಗೆ ನೆಹರುಗಳು ಆಗಿಂದಾಗ ತಳೆಯುತ್ತಿರುವ ಧೋರಣೆಯ ಮರ್ಮವನ್ನು ಅರಿತುಕೊಳ್ಳಲು ಸಹಾಯಕ ಎಂದು ನಮ್ಮ ಓದುಗರು ಮನಗಂಡರೆ ನಮ್ಮ ಉದ್ದೇಶ-ಸಿದ್ಧಿಯಾಯಿತು ಎಂದು ಭಾವಿಸುತ್ತೇವೆ.

ಮುಂದೆ ಈ ಮಾಲೆಯಲ್ಲಿ ಮಗುವಿನ ಮನಸ್ಸು, ಭಂಡವಲವಾದ (Capitalism), ಸಮಾಜವಾದ (Socialism) ಮತ್ತು ಕವಿ ರವೀಂದ್ರರ ಜೀವನ—ದರ್ಶನ ಎಂದು ಮೊದಲಾಗಿ ಗಹನ ಮತ್ತು ಜನಪ್ರಿಯ ವಿಷಯಗಳ ಮೇಲೆ ಒಂದೊಂದು ಪುಸ್ತಕವನ್ನು ಪ್ರಕಟಿಸಬೇಕೆಂದು ಸಂಕಲ್ಪಿಸಿದ್ದೇವೆ. ಹೊಸಹೊಸ ಚಂದಾದಾರರನ್ನು ಒದಗಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಕುಂದಾಪುರ,
11—12—1951

ಪೆರೋಡಿ ಪುಟ್ಟಪ್ಪಯ್ಯ ಕಾರಂತ,
ಸಂಪಾದಕ.

ವಿಶ್ವಬಂಧು ನೆಹರು.

ಲಘುಬರಹ ಮಾಲೆಯ ಎರಡನೆಯ ಬರಹ.

ಬರೆದವರು:
ಕೋಟ ಸುಬ್ರಾಯ ಉರಾಳ, ಕುಂದಾಪುರ.

ಬಿಡಿಪ್ರತಿ 0—6—0. ವಾರ್ಷಿಕ ಚಂದಾ 2—0—0.

ಮುದ್ರಣ ಮತ್ತು ಪ್ರಕಾಶನ:
ಅಜಂತ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್ ಲಿಮಿಟೆಡ್,
ಕುಂದಾಪುರ.

ಸ್ವಕೀಯ

ಪಂಡಿತ ಜವಾಹರಲಾಲ ನೆಹರುಗಳು ಮಹಾ ಪ್ರಭೃತಿಗಳು. ಅವರ ಧೋರಣೆಯ ತತ್ವಗಳನ್ನು ವಿಮರ್ಶಿಸುವುದೆಂದರೆ ನನ್ನಂತಹ ಅಲ್ಪಮತಿಗೆ ತೀರಾ ಸಾಹಸದ ಮಾತೇ ಸರಿ. ಆದರೂ ದೊಡ್ಡ ವಸ್ತುಗಳನ್ನು ಅಳೆಯಲು ಚಿಕ್ಕವಸ್ತುಗಳನ್ನು ಉಪಯೋಗಿಸುವಂತೆ ನಾನು ಅವರ ವಿದೇಶ ಧೋರಣೆಯ ವಿವೇಚನೆಯನ್ನು ಯತ್ನಿಸಿದ್ದೇನೆ. ಇದು ಸಮಗ್ರವೂ ಸಮರ್ಪಕವೂ ಆಗಲಾರದೆಂದು ನಾನು ಬಲ್ಲೆ. ಆದರೆ ಆನೆಯ ಹೆಜ್ಜೆಯ ಗುರುತನ್ನು ನೋಡಿ ಆನೆಯ ಮಹತ್ವಿಕೆಯನ್ನು ಕುಶಲಮತಿಗಳಾದವರು ಊಹಿಸಿಕೊಳ್ಳುವರಂತೆ. ಅಂತೆಯೇ ಓದುಗರು ನನ್ನೀ ಬರೆವಣಿಗೆಯಿಂದ ನೆಹರುಗಳ ಧೋರಣೆಯ ಕಲ್ಪನೆಯನ್ನು ಮಾಡಿಕೊಳ್ಳುವಂತಾದರೆ ನಾನು ಧನ್ಯನೇ ಸರಿ.

ಇದರಲ್ಲಿ ನನ್ನ ಲೋಪದೋಷಗಳು ಹಲವಿರಬಹುದು. ಆದರೆ ಹಿರಿಯ ಕವಿಗಳೊಬ್ಬರು ಇಂತಹ ಸಂದರ್ಭದಲ್ಲಿ ಹೀಗೆ ಹೇಳಿರುವರು:—

ಇರೆದೋಷ ಮಿದರೊಳೆನ್ನವು
ಕೊರತೆಯದರಿನೇಕ ವೀರಚರಿತಕೆ ಬಹುದೇ?
ಅರಲೇಂ ಪಣ್ಣೇನಾದೊಡ
ಮರಳಿಯ ಮರದಾ ಪವಿತ್ರತೆಗೆ ಕುಂದಹುದೇ?

ನಾನೂ ಕೂಡ ಅಂತೆಯೇ ಹೇಳಬಯಸುವೆನು.

ಇತಿ

"ಬರೆದವ"



ವಿಶ್ವಬಂಧು ನೆಹರು.

ವಿಶ್ವಬಂಧು ನೆಹರು.

ತೆರೆಗಳ ನಡುವೆ.

ನನ್ನ ಹತ್ತಿರ ಒಂದು ಹಳೆಯ ಎಟ್ಲಾಸ್ ಇದೆ. ಅದು ಎರಡೂ ಮಹಾ ಯುದ್ಧಗಳನ್ನು ನೋಡಿದೆ. ಅಂತೆಯೇ ಬೇಸರದ ಹೊತ್ತಿಗೆ ಅದು ಮನ ರಂಜನೆಗೆ ಒಂದು ಒಳ್ಳೆಯ ಸಾಧನವಾಗಿದೆ. ಅದನ್ನು ತೆರೆದುಕೊಂಡು ಕುಳಿತರೆ ಕಳೆದ ಒಂದು ತಲೆಮಾರಿನಲ್ಲಾದ ಘಟನೆಗಳೆಲ್ಲಾ ನಮ್ಮ ಕಣ್ಣ ಮುಂದೆ ಬಂದು ನಿಲ್ಲುವುವು. ಇದರಲ್ಲಿನ ಭೂಪಟಗಳೊಡನೆ ಇತ್ತೀಚೆಗಿನ ಎಟ್ಲಾಸಿನ ಭೂಪಟಗಳನ್ನು ಹೋಲಿಸಿದರೆ ಇಷ್ಟು ಅಲ್ಪಾವಧಿಯಲ್ಲಿ ಜಗತ್ತಿನಲ್ಲಿ ಎಷ್ಟು ಬದಲಾವಣೆಗಳಾಗಿವೆ ಎಂದು ನಮಗೆ ಆಶ್ಚರ್ಯವಾಗುವುದು.

ಮೊತ್ತಮೊದಲು ಜಗತ್ತಿನ ಇತಿಹಾಸದಲ್ಲಿಯೇ ಅತಿ ವಿಶಾಲವಾಗಿದ್ದ ಬ್ರಿಟಿಷ್ ಸಾಮ್ರಾಜ್ಯವನ್ನು ನೋಡೋಣ. ಜಗತ್ತಿನ ಎಷ್ಟೊಂದು ಪ್ರದೇಶ ಗಳನ್ನು ಆ ಹೆಮ್ಮೆಯ ಗುಲಾಬಿ ರಂಗು ಆವರಿಸಿಕೊಂಡಿತ್ತು! ಆದರೆ ಈಗ ಅದರಲ್ಲಿ ಎಷ್ಟು ಪ್ರದೇಶಗಳು ಬಣ್ಣ ಬದಲಾಯಿಸಿಬಿಟ್ಟಿವೆ! ಭಾರತ, ಪಾಕಿ ಸ್ಥಾನ್, ಬರ್ಮಾ, ಸಿಂಹಳ—ಎಲ್ಲವೂ ಮೊದಲು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅಡಕವಾಗಿದ್ದವು— ಈಗ ಸ್ವತಂತ್ರವಾಗಿವೆ.

ಇದೇ ರೀತಿ ಎಷ್ಟೋ ರಾಜ್ಯಗಳ ಆಕಾರವೇ ಬದಲಾಗಿದೆ. ಮಧ್ಯ ಯುರೋಪಿನಲ್ಲಿದ್ದ ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯ, ಅದರ ಉತ್ತರಕ್ಕೆ ಹೊಂದಿಕೊಂಡಿದ್ದ ಜರ್ಮನ್ ಸಾಮ್ರಾಜ್ಯ, ನೈಋತ್ಯ ಏಷ್ಯಾದಲ್ಲಿದ್ದ ತುರ್ಕಿ ಸಾಮ್ರಾಜ್ಯ ಇವನ್ನೆಲ್ಲಾ ನೋಡಿರಿ.. ಈಗ ಏನಾಗಿವೆ? ಎಲ್ಲವು ಛಿನ್ನಭಿನ್ನ ವಾಗಿ ಹಲವಾರು ತುಂಡು ರಾಜ್ಯಗಳಾಗಿ ಬಿಟ್ಟಿವೆ.

ಇನ್ನೂ ಕೆಲವು ರಾಜ್ಯಗಳು ತಮ್ಮ ಜೀವನ ತತ್ವವನ್ನೇ ಮಾರ್ಪಾಟು ಗೊಳಿಸಿಕೊಂಡಿವೆ. ಮೊದಲು ರಷ್ಯಾದಲ್ಲಿ ಇತರ ದೇಶಗಳಲ್ಲಿದ್ದಂತೆಯೇ

ಭಂಡವಾಳವಾದವಿತ್ತು. ಕ್ರಿ. ಶ. 1917ರಲ್ಲಿ ಅಲ್ಲಿ ಒಂದು ಕ್ರಾಂತಿಯಾಯಿತು. ಅಂದಿನಿಂದ ಅಲ್ಲಿ ಸಮಾಜವಾದವು ನೆಲೆಗೊಂಡಿದೆ. ಈಗ ಇದು ರಷ್ಯಾದ ನೆರೆರಾಷ್ಟ್ರಗಳಾದ ಪೋಲೆಂಡ್, ಹಂಗೇರಿ, ರುಮೇನಿಯಾ ಮೊದಲಾದ ರಾಷ್ಟ್ರಗಳಲ್ಲಿಯೂ ಪ್ರಚಾರಗೊಂಡಿದೆ. ಚೀನವೂ ಕೂಡಾ ಇತ್ತೀಚೆಗೆ ಸಮಾಜವಾದವನ್ನು ಅಂಗೀಕರಿಸಿದೆ.

ಈ ಬದಲಾವಣೆಗಳೆಲ್ಲಾ ಜಗತ್ತಿನ ಇತಿಹಾಸದ ಮೇಲೆ ಎಂತಹ ಪ್ರಭಾವವನ್ನು ಬೀರುತ್ತಿವೆ!

ಈಗಲೂ ಕೂಡ ಎಷ್ಟೋ ಘಟನೆಗಳು ಚರಿತ್ರಾರ್ಹವಾದ ಬದಲಾವಣೆಗಳನ್ನು ನಮ್ಮ ಕಣ್ಣೆದುರಿಗೇ ಮಾಡುತ್ತಿವೆ. ಉದಾಹರಣೆಗಾಗಿ ಕೊರಿಯಾ ಯುದ್ಧವನ್ನು ತೆಗೆದುಕೊಳ್ಳುವ. ಕೊರಿಯಾದಲ್ಲಿ ಉತ್ತರ ಕೊರಿಯಾಕ್ಕೂ ದಕ್ಷಿಣ ಕೊರಿಯಾಕ್ಕೂ ಯುದ್ಧ ನಡೆಯುತ್ತಿದೆ. ದಕ್ಷಿಣ ಕೊರಿಯಾದ ಕಡೆಯಿಂದ ಸಂಯುಕ್ತ ರಾಷ್ಟ್ರಗಳ ಸಂಘವು ಯುದ್ಧ ಮಾಡುತ್ತಿದೆ. ಉತ್ತರ ಕೊರಿಯನರ ಸಹಾಯಕ್ಕಾಗಿ ಚೀನಿಯರು ಬಂದಿದ್ದಾರೆ ಈಗ ಯುದ್ಧ ವಿರಾಮದ ಮಾತುಕತೆಗಳಾಗುತ್ತಿವೆ. ಅಂತೂ ಇದು ತೃತೀಯ ಮಹಾಯುದ್ಧದ ಪೂರ್ವರಂಗವೋ ಎಂದು ಭಾಸವಾಗುತ್ತಿದೆ.

ಅದೇ ರೀತಿ ಇಜಿಪ್ಟಿನ ಸುಯೇಜ್ ಕಾಲುವೆಯ ಪ್ರಶ್ನೆ. ಈ ಕಾಲುವೆಯ ರಕ್ಷಣೆಗೆ ಬ್ರಿಟಿಷರು ಸ್ವಲ್ಪ ಸೈನ್ಯವನ್ನಿಟ್ಟಿದ್ದಾರೆ. ಈ ಸೈನ್ಯವನ್ನು ತೆಗೆಯಬೇಕೆಂದು ಇಜಿಪ್ಶಿಯನ್ನರ ಹಟ. ಬ್ರಿಟಿಷರು ಇದಕ್ಕೆ ಒಪ್ಪುತ್ತಿಲ್ಲ. ಇದರಿಂದಾಗಿ ಅರಬರಾಷ್ಟ್ರಗಳೆಲ್ಲಾ ಸಿಟ್ಟಾಗಿವೆ. ಮೇಲಾಗಿ ರಷ್ಯಾವೂ ಈ ಜಗಳದಲ್ಲಿ ಪ್ರವೇಶಿಸುವ ಸಂಭವವಿದೆ. ಹೀಗೆ ಇದೊಂದು ಮಹತ್ವಪೂರ್ಣ ಘಟನೆಯಾಗಿದೆ.

ಇದೇ ರೀತಿ ಇನ್ನೂ ಎಷ್ಟೋ ಘಟನೆಗಳು ನಮ್ಮ ಎದುರಿಗೇ ಇತಿಹಾಸವನ್ನು ರಚಿಸುತ್ತಿವೆ; ಜಗತ್ತಿನ ಸ್ವರೂಪವನ್ನು ಬದಲಾಯಿಸುತ್ತಿವೆ.

ಹೀಗೆ ದಿನದಿನಕ್ಕೂ ಬದಲಾವಣೆಗೊಳ್ಳುತ್ತಿರುವ ಪ್ರಪಂಚದಲ್ಲಿ ನಮ್ಮ

ಭಾರತವು ಹೇಗೆ ವರ್ತಿಸಬೇಕು? ಇತರ ರಾಷ್ಟ್ರಗಳೊಡನೆ ನಮ್ಮ ವ್ಯವಹಾರವು ಹೇಗಿರಬೇಕು? ಇದನ್ನು ನಾವು ವಿವೇಚಿಸಬೇಕಾಗಿದೆ. ಏಕೆಂದರೆ ತನ್ನ ಸುತ್ತಲಿನ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗಲಾರದ ಜೀವಿಯು ನಾಶ ಹೊಂದುತ್ತದೆ. ಸನ್ನಿವೇಶವು ಬದಲಾದಂತೆ ಅದಕ್ಕನುಗುಣವಾಗಿ ತನ್ನ ಹೊಂದಿಕೆಯನ್ನೂ ಬದಲಿಸುತ್ತಾ ಹೋದರೆ ಮಾತ್ರ ಜೀವನವು ಸಾಧ್ಯ. ಈ ತತ್ವವು ರಾಷ್ಟ್ರಗಳ ಜೀವನಕ್ಕೂ ಅನ್ವಯಿಸುತ್ತದೆ. ಯಾವ ರಾಷ್ಟ್ರವು ತನ್ನ ಸುತ್ತಲಿನ ಪರಿಸ್ಥಿತಿಯಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ಹೊಂದಿಕೊಂಡು ನಡೆಯುವುದಿಲ್ಲವೋ ಆ ರಾಷ್ಟ್ರವು ನಿಶ್ಚಯವಾಗಿಯೂ ವಿನಾಶವನ್ನೈದುವುದು.

ಆದುದರಿಂದ ಒಂದು ರಾಷ್ಟ್ರದ ವಿದೇಶ ವ್ಯವಹಾರ ಧೋರಣೆಯು ಆ ರಾಷ್ಟ್ರದ ಅದೃಷ್ಟವನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ ಎಂದು ಧಾರಾಳವಾಗಿ ಹೇಳಬಹುದು. ಅದರ ಆಂತರಿಕ ಸ್ಥಿತಿಯು ಎಷ್ಟೇ ಉತ್ತಮವಿರಲಿ; ಅದರ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳೆಲ್ಲಾ ಎಷ್ಟೇ ಚೆನ್ನಾಗಿರಲಿ; ಅದರ ವಿದೇಶ ವ್ಯವಹಾರದಲ್ಲಿ ಅದು ತಪ್ಪು ಹೆಜ್ಜೆಗಳನ್ನಿಟ್ಟರೆ ಗಂಡಾಂತರಕ್ಕೀಡಾಗಿ ಬಿಡುವುದು.

ಒಂದು ಹಡಗವು ಸಮುದ್ರದಲ್ಲಿ ಹೋಗುತ್ತಿದೆ ಎನ್ನೋಣ. ಆಗ ಸುತ್ತಲೂ ತೆರೆಗಳು ಅಲ್ಲೋಲಕಲ್ಲೋಲವಾಗಿ ಎದ್ದು ನೊರೆದು ಬೀಳುತ್ತಿವೆ. ಮಳೆ ಸುರಿಯುತ್ತಿದೆ. ಮಂಜು ಮುಸುಕಿ ದೃಕ್ಪಥವು ಮುಚ್ಚಿಬಿಟ್ಟಿದೆ. ಗಾಳಿಯು ಸೆಳೆಸೆಳೆಯಾಗಿ ಘಳಿಗೆಗೊಂದು ದಿಕ್ಕಿನಿಂದ ಬೀಸುತ್ತಿದೆ. ಹೀಗೆ ನಿಮಿಷ ನಿಮಿಷವೂ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಹಡಗವು ಎಷ್ಟೇ ಭದ್ರವಾದದ್ದಿರಲಿ, ನಾವಿಕರು ಎಷ್ಟೇ ನಿಪುಣರಿರಲಿ, ಸಾಧನಸಾಮಗ್ರಿಗಳು ಎಷ್ಟೇ ವಿಪುಲವಾಗಿರಲಿ, ಎಲ್ಲವೂ ವ್ಯರ್ಥ. ಆ ಸಮಯದಲ್ಲಿ ಹಡಗವು ಸೆಳೆತಕ್ಕೆ ಸಿಕ್ಕಿ, ದಿಕ್ಕುಗೆಟ್ಟು, ಬಂಡೆಗಳಿಗಪ್ಪಳಿಸದಂತೆ ಸುರಕ್ಷಿತವಾಗಿ ಪಾರಾಗಲು ಬೇಕಾದುದು ಒಂದೇ ಒಂದು. ಅದು ಯಾವುದೆಂದರೆ ಗುರಿಯನ್ನು ಅರಿತು, ದಾರಿಹಿಡಿದು ನಡೆಸಬಲ್ಲ ಚುಕ್ಕಾಣಿಯ ಕೈ. ಇದೇ ರಾಷ್ಟ್ರ ಜೀವನದಲ್ಲಿಯು

ವಿದೇಶಧೋರಣೆ.

ಹದಿನಾರನೇ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿಯ ಅತಿ ಪ್ರಬಲರಾಜ್ಯವಾಗಿತ್ತು. ಅದರ ಸಂಪತ್ ಸಮೃದ್ಧಿ, ಆಂತರಿಕ ಶಕ್ತಿ, ಇವುಗಳ ಕುರಿತು ಹಲವು ವಿದೇಶೀ ಪ್ರವಾಸಿಕರು ಮುಕ್ತಕಂಠದಿಂದ ಹೊಗಳಿರುವರು. ಆದರೂ ಕ್ರಿ.ಶ. 1565ರಲ್ಲಿ ಈ ಪ್ರಬಲ, ಸಂಪತ್ಸಮೃದ್ಧ, ವೈಭವದ ಸಾಮ್ರಾಜ್ಯವು ಒಮ್ಮಿಂದೊಮ್ಮೆಲೇ ಧ್ವಂಸವಾಗಿಬಿಟ್ಟಿತು. ಕಾರಣ? ವಿಜಯನಗರದ ಅರಸರ ದುಡುಕಿನ ವಿದೇಶಧೋರಣೆ. ವಿಜಯನಗರದ ಉತ್ತರದಲ್ಲಿ ಬಹಮನಿ ರಾಜ್ಯದ ನಾಲ್ಕು ಚಿಕ್ಕ ಸಂಸ್ಥಾನಗಳಿದ್ದವು. ವಿಜಯ ನಗರದ ಅರಸು ರಾಮರಾಜನು ಈ ಸಂಸ್ಥಾನಗಳಲ್ಲಿ ಒಂದರ ಪಕ್ಷಕಟ್ಟಿ ಇನ್ನೊಂದರ ಮೇಲೆ ಬೀಳುತ್ತಿದ್ದನು. ಒಮ್ಮೆ ಅಹಮ್ಮದ್ ನಗರವನ್ನು ಸೇರಿಕೊಂಡು ಬಿಜಾಪುರವನ್ನು ಹ್ರಾಸಗೊಳಿಸಿದನು. ಇನ್ನೊಮ್ಮೆ ಬಿಜಾಪುರವನ್ನು ಕಟ್ಟಿಕೊಂಡು ಅಹಮ್ಮದ ನಗರವನ್ನು ಹಾಳು ಮಾಡಿದನು. ಈ ಬಗೆಯ ಧೋರಣೆಯಿಂದ ಕೊನೆಗೆ ನಾಲ್ಕೂ ಸುಲ್ತಾನರೂ ಒಟ್ಟಾದರು. ವಿಜಯನಗರದ ಮೇಲೆ ದಂಡೆತ್ತಿ ಬಂದರು. ತಾಳಿಕೋಟೆಯ ಕಾಳಗವಾಯಿತು. ರಾಮರಾಜನು ಮಡಿದನು. ವಿಜಯನಗರವು ಹಾಳು ಹಂಪೆಯಾಯಿತು.

ಇದೇ ರೀತಿ ಇನ್ನೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಹನ್ನೆರಡನೇ ಶತಮಾನದಲ್ಲಿ ಡಿಲ್ಲಿಯ ದೊರೆಯಾಗಿದ್ದ ಪೃಥ್ವೀರಾಜನೂ ಕನೋಜದ ಅರಸು ಜಯಚಂದನೂ ತಪ್ಪು ವಿದೇಶ ಧೋರಣೆಯಿಂದಲೇ ಹಾಳಾದರು. ಪೃಥ್ವೀರಾಜನಿಗೂ ಜಯಚಂದನಿಗೂ ಮನಸ್ತಾಪವಿತ್ತು. ಅದಕ್ಕಾಗಿ ಜಯಚಂದನು ಅಫಘಾನಿಸ್ಥಾನದ ದೊರೆಯಾದ ಘೋರಿಮಹಮ್ಮದನನ್ನು ಸಹಾಯಕ್ಕೆ ಕರೆದನು. ಘೋರಿಯು ಬಂದು ಪೃಥ್ವಿಯನ್ನು ಸೋಲಿಸಿ ಕೊಂದನು. ನಂತರ ಜಯಚಂದನ ಮೇಲೂ ಬಿದ್ದು ಅವನನ್ನು ರಾಜ್ಯದಿಂದ ಓಡಿಸಿಬಿಟ್ಟನು.

ಹತ್ತೊಂಬತ್ತನೇ ಶತಮಾನದ ಆದಿಯಲ್ಲಿ ಫ್ರಾನ್ಸಿನ ಚಕ್ರವರ್ತಿಯಾಗಿದ್ದ ನೆಪೋಲಿಯನ್ನನು ಇದಕ್ಕೆ ಇನ್ನೊಂದು ಉತ್ತಮ ನಿದರ್ಶನ. ಅವನ ರಾಜ್ಯಾಡಳಿತೆಯು ಅತ್ಯುತ್ತಮವಾದುದಾಗಿತ್ತು. ಅವನ ಸೈನಿಕರು ಅವನಿ

ಗೋಸ್ಕರ ಪ್ರಾಣಕೊಡಲು ಹಾತೊರೆಯುತ್ತಿದ್ದರು. ಪ್ರಜೆಗಳು ಅವನನ್ನು ದೇವರಂತೆ ಕಾಣುತ್ತಿದ್ದರು. ಇಡೀ ಯುರೋಪು ಅವನ ಮುಷ್ಟಿಯೊಳಗಿದ್ದಿತ್ತು. ಇಷ್ಟಿದ್ದರೂ ಅವನು ಕೊನೆಯಲ್ಲಿ ಸೋತು ಬ್ರಿಟಿಷರ ಶರಣಾರ್ಥಿಯಾದನು. ಹೀಗಾಗಲು ಅವನು ಅನುಸರಿಸಿದ ವಿದೇಶ ಧೋರಣೆಯೇ ಕಾರಣ. ಮೊದಲು ಅವನು ರಷ್ಯಾದೊಡನೆ ಸ್ನೇಹದಿಂದಿದ್ದನು. ನಂತರ ರಷ್ಯಾದ ಮೇಲೆ ದಾಳಿಮಾಡಿ ತನ್ನ ಬಲವನ್ನೆಲ್ಲಾ ಕಳೆದುಕೊಂಡನು. ಇತ್ತ ಸ್ಪೈಯಿನನ್ನೂ ಕೆಣಕಿದನು. ಹೀಗಾಗಿ ಕೊನೆಗೆ ಹಾಳಾದನು.

ಮೊನ್ನೆಮೊನ್ನೆಯ ಹಿಟ್ಲರನೂ ಕೂಡ ಇದೇ ನೆಪೋಲಿಯನ್ನನ ಹಾದಿಯನ್ನು ತುಳಿದು ಹೇಗೆ ಹಾಳಾದನೆಂಬುದು ಎಲ್ಲರಿಗೂ ತಿಳಿದ ವಿಷಯವೇ.

ಅಂತೆಯೇ ಜಪಾನ್, ಇಟಲಿಗಳ ಇಂದಿನ ಅವಸ್ಥೆಯನ್ನೂ ನೋಡಿದರೆ ಆಕ್ರಮಣಶೀಲ ವಿದೇಶಧೋರಣೆಯಿಂದ ರಾಷ್ಟ್ರಗಳಿಗೆ ಹೇಗೆ ಅಪಾಯವುಂಟಾಗುವುದೆಂದು ಮನವರಿಕೆಯಾಗುವುದು.

ಹೀಗೆ ಒಂದು ರಾಷ್ಟ್ರದ ಭವಿತವ್ಯವು ಬಹುಮಟ್ಟಿಗೆ ಅದರ ವಿದೇಶ ಧೋರಣೆಯನ್ನವಲಂಬಿಸಿದೆ. ವಿದೇಶ ಧೋರಣೆಯು ದೋಷಪೂರಿತವಾಗಿದ್ದರೆ ರಾಷ್ಟ್ರವು ಎಷ್ಟು ಪ್ರಬಲವಾಗಿದ್ದರೂ ಗಂಡಾಂತರಕ್ಕೆ ಖಂಡಿತ ಗುರಿಯಾಗುತ್ತದೆ. ಹಾಗೆಯೇ ವಿದೇಶ ಧೋರಣೆಯು ನಿರ್ದೋಷವಾಗಿದ್ದರೆ ದುರ್ಬಲರಾಷ್ಟ್ರವಾದರೂ ಕೂಡ ಎಷ್ಟೋ ಸಂಕಷ್ಟಗಳಿಂದ ಪಾರಾಗಬಲ್ಲುದು.

ಆದುದರಿಂದ ನಮ್ಮ ರಾಷ್ಟ್ರದ ವಿದೇಶ ಧೋರಣೆಯು ಯಾವ ತತ್ವಗಳನ್ನಾಧರಿಸಿ ಮುಂದರಿಯುತ್ತಿದೆ, ಅದು ಎಷ್ಟರ ಮಟ್ಟಿಗೆ ರಾಷ್ಟ್ರದ ಏಳಿಗೆಗೆ ಪೋಷಕವಾಗಿದೆ, ಹಾಗೂ ಜಗತ್ತಿನ ಕಲ್ಯಾಣವನ್ನು ಸಾಧಿಸುತ್ತಿದೆ ಎಂಬುದನ್ನು ವಿವೇಚಿಸಬೇಕಾದುದು ರಾಷ್ಟ್ರದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ.

ಒಂದು ಜಗತ್ತು.

"ಚಿಮಣಿ ಎಣ್ಣೆ ಮುಗಿದಿದೆ"— ಮನೆಯಲ್ಲಿ ವಾರ್ತಾಶಾಖೆಯಿಂದ ಬಂದ ವಾರ್ತೆ ಇದು. ನಾನು ಹಿಡಿದ ಕೆಲಸವನ್ನು ಬದಿಗಿಟ್ಟು ಚಿಮಣಿಎಣ್ಣೆ ತರಲು ಅಂಗಡಿಗೆ ಹೋದೆ. ಅಲ್ಲಿ ಸಾಹುಕಾರರು ನನ್ನನ್ನು ನೋಡಿ ನಗುತ್ತಾ "ನಿನ್ನೆಯೇ ನೀವು ಬಂದಿದ್ದರೆ ಡಬ್ಬಿಗೆ ನಾಲ್ಕಾಣೆ ಕಡಿಮೆಯಲ್ಲಿ ಸಿಗುತಿತ್ತು. ಇವತ್ತು ನಾಲ್ಕಾಣೆ ದರ ಏರಿದೆ" ಎಂದರು. "ಇಂದೇನು ವಿಶೇಷ" ಎಂದು ಕೇಳಿದೆ. "ಇರಾನಿನ ಎಣ್ಣೆಯ ತಂಟೆ" ಎಂದರು.

ಎಂತಹ ವಿಚಿತ್ರ ಜಗತ್ತು! ಇರಾನಿನಲ್ಲಿ ಇಂಗ್ಲಿಷರ ಒಂದು ಎಣ್ಣೆಯ ಕಂಪೆನಿಗೂ ಇರಾನಿನ ಸರಕಾರಕ್ಕೂ ಜಗಳವಾಯಿತು. ಇರಾನಿನ ಸರಕಾರವು ಎಣ್ಣೆಯ ಕೈಗಾರಿಕೆಯನ್ನು ರಾಷ್ಟ್ರೀಕರಣಮಾಡಿತು—ಅಂದರೆ ಸರಕಾರೀ ಕೈಗಾರಿಕೆಯಾಗಿ ನಡೆಸಲು ನಿಶ್ಚೈಸಿತು. ಆದುದರಿಂದ — ನನಗೆ ನಾಲ್ಕಾಣೆ ಜುಲ್ಮಾನೆ. ನಾನು ಆ ಎಣ್ಣೆಯ ಕಂಪೆನಿಯ ಪಾಲುದಾರನಲ್ಲ. ಅದರ ಲಾಭನಷ್ಟಕ್ಕೆ ನಾನೇನು ಜವಾಬುದಾರನೂ ಅಲ್ಲ. ಹಾಗೆಯೇ ಇರಾನಿನ ಸರಕಾರವು ಆ ಎಣ್ಣೆಯ ಕೈಗಾರಿಕೆಯನ್ನು ರಾಷ್ಟ್ರೀಕರಿಸುವಂತೆ ನಾನು ಪ್ರೋತ್ಸಾಹಿಸಿದವನೂ ಅಲ್ಲ. ಆದರೂ ಅವರವರ ಜಗಳದಲ್ಲಿ ನನಗೆ ನಾಲ್ಕಾಣೆ ನಷ್ಟ.

ಇದೇ ರೀತಿ ಕೊರಿಯಾ ಯುದ್ಧ ಪ್ರಾರಂಭವಾದಾಗಲೂ ನನಗೊಂದು ವಿಚಿತ್ರ ಅನುಭವವಾಗಿತ್ತು. ತೊಗರಿ ಬೇಳೆ ಸೇರಿಗೆ ಒಂದಾಣೆ ದರ ಏರಿತ್ತು.

ಇರಾನಿನ ಎಣ್ಣೆಯ ತಂಟೆಯಿಂದ ಚಿಮಣಿ ಎಣ್ಣೆಗೆ ದರ ಏರಿದುದಕ್ಕಾದರೂ ಒಂದು ಅರ್ಥವಿದೆ: ಏನೆಂದರೆ ನಮಗೆ ಎಣ್ಣೆ ಒದಗಿಸುವ ಕಂಪೆನಿಗೆ ತೊಂದರೆಯಾಗಿದೆ; ಅದರಿಂದ ನಮ್ಮ ಎಣ್ಣೆಯ ಪೂರೈಕೆಯೇ ನಿಂತು ಹೋಗಬಹುದು; ಆದುದರಿಂದ ಎಣ್ಣೆಯ ದರ ಏರಿತು. ಆದರೆ ಕೊರಿಯಾ ಯುದ್ಧದಿಂದ ತೊಗರಿ ಬೇಳೆಗೆ ದರ ಏರಿದ್ದು ಏಕೆ ಎಂದು ಅಷ್ಟು ಸುಲಭದಲ್ಲಿ ಅರ್ಥವಾಗುವಂತಿಲ್ಲ. ಯುದ್ಧಕ್ಕೆ ತೊಗರಿ ಬೇಳೆ ಬೇಕಾಗುವುದಿಲ್ಲ. ಕೊರಿಯನರಾಗಲೀ ಚೀನಿಯರಾಗಲೀ ತೊಗರಿಬೇಳೆ ತಿನ್ನುವವರಲ್ಲ. ಆದರೂ ತೊಗರಿ ಬೇಳೆಗೆ ದರ ಏರಿತು.

ಹಿಂದಿನ ಕಾಲದಲ್ಲಿ ಹೀಗೆ ಆಗುತ್ತಿರಲಿಲ್ಲ:

ಗ್ರೀಕ್ ದೊರೆಯಾದ ಅಲೆಕ್ಸಾಂಡರನು ಕ್ರಿ. ಪೂ. 327ರಲ್ಲಿ ಹಿಂದೂ ದೇಶದ ಮೇಲೆ ದಾಳಿ ಇಟ್ಟನು. ಪಂಜಾಬಿನ ಜೀಲಂ ನದೀತೀರದಲ್ಲಿ ಅವನಿಗೂ ಪಂಜಾಬಿನ ದೊರೆಯಾದ ಪೋರಸನಿಗೂ ಯುದ್ಧವಾಯಿತು. ಉಭಯ ಸೇನೆಗಳಿಗೂ ಯುದ್ಧ ನಡೆಯುತಿದ್ದಾಗ ಸಮೀಪದ ಗದ್ದೆಯೊಂದರಲ್ಲಿ ರೈತನೊಬ್ಬನು ಎಂದಿನಂತೆ ಉಳುತಿದ್ದನಂತೆ!

ಕ್ರಿ. ಶ. ಹನ್ನೊಂದನೇ ಶತಮಾನದ ಆದಿಯಲ್ಲಿ ಉತ್ತರ ಹಿಂದೂದೇಶದ ಮೇಲೆ ಘಜನೀ ಮಹಮ್ಮೂದನು ಹದಿನೇಳು ಬಾರಿ ದಾಳಿ ಮಾಡಿದನು. ಎಷ್ಟೋ ರಾಜ್ಯಗಳು ಉರುಳಿದುವು. ಮಥುರಾ, ಸೋಮನಾಥದ ದೇವಾಲಯಗಳು ನೆಲಸಮವಾದುವು. ಆದರೆ ಅದೇ ಸಮಯದಲ್ಲಿ ದಕ್ಷಿಣ ಹಿಂದೂ ದೇಶದಲ್ಲಿ ಜೀವನವು ಎಂದಿನಂತೆ ಪ್ರಶಾಂತವಾಗಿ ಸಾಗಿದ್ದಿತು. ಪ್ರಸಿದ್ಧ ರಾಜರಾಜ ಚೋಳನು ತನ್ನ ದಿಗ್ವಿಜಯವನ್ನು ಯಥಾಸಾಂಗವಾಗಿ ನಡೆಸಿದ್ದನು. ತಂಜಾವೂರಿನ ಬೃಹದೀಶ್ವರ ದೇವಾಲಯವನ್ನು ಕಟ್ಟಿಸುತಿದ್ದನು. ಉತ್ತರದ ಉತ್ಪಾತಗಳು ಅವನನ್ನು ಎಳ್ಳಷ್ಟೂ ಬಾಧಿಸಿದಂತೆ ಕಾಣುವುದಿಲ್ಲ.

ಹೀಗೆ ಅಂದಿನ ಜಗತ್ತಿನಲ್ಲಿ ಒಂದೇ ದೇಶದ ಒಂದು ಭಾಗದಲ್ಲಾದ ಘಟನೆಯ ಬೇಗೆಯು ಇನ್ನೊಂದು ಭಾಗಕ್ಕೆ ತಟ್ಟುತ್ತಿರಲಿಲ್ಲ; ಒಂದುವೇಳೆ ತಟ್ಟುವುದಾದರೂ ಬಹಳ ಕಾಲ ಹಿಡಿಯುತಿತ್ತು. ಅನ್ಯದೇಶಗಳಲ್ಲಾದ ಘಟನೆಗಳಂತೂ ಗಣನೆಗೇ ಬರುತ್ತಿರಲಿಲ್ಲ. ದೂರ ದೂರದ ದೇಶಗಳು ಇದ್ದರೂ ಇಲ್ಲದಂತೆಯೇ ಆಗಿದ್ದುವು. ಉದಾಹರಣೆಗಾಗಿ ಅಮೇರಿಕದ ಇರುವಿಕೆಯು ಗೊತ್ತೇ ಇರಲಿಲ್ಲ. ಚೀನಾ, ಭಾರತಗಳು ಯುರೋಪಿಯನ್ನರಿಗೆ ಕಥೆ, ಉಪಾಖ್ಯಾನಗಳಲ್ಲಿ ಬರುವ ಹೆಸರುಗಳಾಗಿದ್ದುವು. ಹಾಗೆಯೇ ಭಾರತೀಯರಿಗೆ ಯುರೋಪಿಯನ್ನರ ವಿಷಯ ತೀರಾ ವಿಚಿತ್ರವಾದ ಅಭಿಪ್ರಾಯಗಳಿದ್ದುವು. ನಿಜಕ್ಕೂ ಅಂದಿನ ಜಗತ್ತಿನಲ್ಲಿ ಪ್ರತಿಯೊಂದು ದೇಶವೂ ಒಂದೊಂದು ಸ್ವಯಂಪೂರ್ಣ ಘಟಕವಾಗಿದ್ದಿತು.

ಆದರೆ ಇಂದಿನ ಜಗತ್ತಿನಲ್ಲಾದರೋ ಒಂದು ಘಟನೆಯು ಸಾವಿರಾರು

ಮೈಲುಗಳ ಆಚೆ ನಡೆದರೂ ಅದರ ಪರಿಣಾಮವು ಆಗಿಂದಾಗಲೇ ನಮ್ಮ ಜೀವನದ ಮೇಲೆ ಆಗಿಬಿಡುವುದು. ನಮ್ಮ ದೈನಂದಿನದ ಚಿಕ್ಕ ಪುಟ್ಟ ವ್ಯವಹಾರಗಳಿಗೂ ಕೂಡ ಅದರ ಬೇಗೆಯು ತಟ್ಟಿಬಿಡುವುದು. ಜಿನುಗೆ ಎಣ್ಣೆ, ತೊಗರಿ ಬೇಳೆಗಳಿಗೂ ಅದರ ಸೋಂಕು ತಗಲಿಬಿಡುವುದು.

1949ರಲ್ಲಿ ಇಂಗ್ಲೆಂಡು ತನ್ನ ನಾಣ್ಯದ ಬೆಲೆಯನ್ನು ವಿಚ್ಛೇದನ ಮಾಡಿತು—ಅಂದರೆ ಪವನ್ನಿಗೆ ಇತರ ದೇಶಗಳ ನಾಣ್ಯಗಳಲ್ಲಿ ಆಗುವ ಬೆಲೆಯನ್ನು ಸೇಕಡಾ 30·5ರಷ್ಟು ಕಡಿಮೆಮಾಡಿ ನಿರ್ಧರಿಸಿತು. ಆಗ ನಮ್ಮ ಸರಕಾರವೂ ನಮ್ಮ ರೂಪಾಯಿಯ ಬೆಲೆಯನ್ನು ಅಷ್ಟೇ ಪ್ರಮಾಣಕ್ಕೆ ಇಳಿಸಿತು; ಏಕೆಂದರೆ ನಮ್ಮ ರೂಪಾಯಿಯು ಇಂಗ್ಲೆಂಡಿನ ಪವನ್ನಿಗೆ ಹೊಂದಿಕೊಂಡಿದೆ. ಮಾತ್ರವಲ್ಲ ಪವನ್ನಿನ ಸಂಬಂಧವುಳ್ಳ ರಾಷ್ಟ್ರಗಳೊಡನೆ ನಮ್ಮ ಆರ್ಥಿಕ ವ್ಯವಹಾರವೂ ಅಧಿಕವಿದೆ. ಆದರೆ ಪಾಕಿಸ್ಥಾನವು ಮಾತ್ರ ತನ್ನ ರೂಪಾಯಿಯ ಬೆಲೆಯನ್ನು ಇಳಿಸಲೇ ಇಲ್ಲ. ಇದರಿಂದ ಪಾಕಿಸ್ಥಾನದ ರೂಪಾಯಿಯ ಬೆಲೆಯು ನಮ್ಮ ರೂಪಾಯಿಯ ಬೆಲೆಯ ಸುಮಾರು ಒಂದೂವರೆಯಷ್ಟಾಯಿತು. ಪಾಕಿಸ್ಥಾನಕ್ಕೆ ಕೊಡಬೇಕಾಗುವ ಹಣವನ್ನು ಒಂದಕ್ಕೆ ಒಂದೂವರೆಯಂತೆ ನಾವು ಕೊಡಬೇಕಾಯಿತು. ನಮಗೆ ಬರಬೇಕಾದುದಕ್ಕೆ ಪಾಕಿಸ್ಥಾನವು ಬರೀ ಮೂರರಲ್ಲಿ ಎರಡರಷ್ಟು ತೆತ್ತರೆ ಸಾಕಾಗುವಂತಾಯಿತು. ನಮ್ಮ ಸರಕಾರವು ಈ ಕ್ರಮವನ್ನು ಒಪ್ಪಲಿಲ್ಲ. ಅದು ಪಾಕಿಸ್ಥಾನದ ನಾಣ್ಯದ ಬೆಲೆಯನ್ನು ಅಂಗೀಕರಿಸಲಿಲ್ಲ. ಪರಿಣಾಮವಾಗಿ ಎರಡೂ ರಾಷ್ಟ್ರಗಳೊಳಗಿನ ವ್ಯಾಪಾರವು ನಿಂತೇ ಹೋಯಿತು. ಅಷ್ಟರಲ್ಲಿ ಬಂತು ಕೊರಿಯಾ ಯುದ್ಧ! ಪಾಕಿಸ್ಥಾನದ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿತು. ಪಾಕಿಸ್ಥಾನದ ರೂಪಾಯಿಗೆ ಅಂತರ್ರಾಷ್ಟ್ರೀಯ ಬೆಲೆ ಏರಿತು. ಅಂತೆಯೇ ನಮ್ಮ ಸರಕಾರವೂ ತನ್ನ ಛಲವನ್ನು ಬಿಟ್ಟು ಪಾಕಿಸ್ಥಾನದ ರೂಪಾಯಿಯ ಬೆಲೆಯನ್ನು ಅಂಗೀಕರಿಸಿತು. ಇದರಿಂದ ಎರಡೂ ರಾಷ್ಟ್ರಗಳೊಳಗಿನ ವ್ಯಾಪಾರವು ಪುನಃ ಪ್ರಾರಂಭವಾಯಿತು. ನೋಡಿರಿ! ಎಲ್ಲಿಂದ ಎಲ್ಲಿಗೆ ಬಂತು? ಕೊರಿಯಾ ಎಲ್ಲಿ? ಭಾರತವೆಲ್ಲಿ? ಆದರೂ ಒಂದರಲ್ಲಾದ ಘಟನೆಯು ಇನ್ನೊಂದರ ಮೇಲೆ ಎಷ್ಟು ಪರಿಣಾಮಕಾರಿಯಾಯಿತು!

ಹೀಗಾಗಲು ಕಾರಣವೇನು? ಇಂದಿನ ಜಗತ್ತಿನ ಪರಿಸ್ಥಿತಿಯೇ ಕಾರಣ. ಇಂದು ಜಗತ್ತು ಹಿಂದಿನಂತೆ ಇಲ್ಲ.

ಮೊದಲಾಗಿ ಇಂದು ಜಗತ್ತು ಬಲು ಚಿಕ್ಕದಾಗಿದೆ. ಹಿಂದೆ ತಿಂಗಳು ಗಟ್ಟಲೆ ಹಿಡಿಯುತಿದ್ದ ಪ್ರಯಾಣವನ್ನು ಇಂದು ಕೆಲವೇ ತಾಸುಗಳಲ್ಲಿ ಮುಗಿಸಿ ಬಿಡಬಹುದಾಗಿದೆ. ಹದಿಮೂರನೇ ಶತಮಾನದಲ್ಲಿ ಇಟಲಿ ದೇಶದ ವೆನಿಸು ನಗರದ ಮಾರ್ಕೊ ಪೋಲೋ ಎಂಬವನು ಚೀನಾದೇಶಕ್ಕೆ ಹೋಗಿದ್ದನು. ಅವನಿಗೆ ಹೋಗಲು ನಾಲ್ಕು ವರ್ಷ, ಬರಲು ಮೂರು ವರ್ಷ ಹಿಡಿಯಿತು. ಇಂದು ಅದೇ ದೂರವನ್ನು ವಿಮಾನದಲ್ಲಿ ಒಂದೇ ದಿನದಲ್ಲಿ ಕ್ರಮಿಸುತ್ತಾರೆ. ಹಾಗೆಯೇ ತಂತಿ, ಆಕಾಶವಾಣಿ ಮೊದಲಾದುವುಗಳೂ ಜಗತ್ತಿನ ಒಂದು ಕಡೆ ಯಲ್ಲಾದ ಘಟನೆಯ ಸುದ್ದಿಯನ್ನು ಕೆಲವೇ ನಿಮಿಷಗಳಲ್ಲಿ ಜಗತ್ತಿನ ಎಲ್ಲೆಡೆ ಗಳಲ್ಲೂ ಹರಡಿ ಬಿಡುತ್ತವೆ. ಇವಲ್ಲದೆ ಹಿಂದಿನ ಎಷ್ಟೋ ಪ್ರಾಕೃತಿಕ ಆತಂಕ ಗಳು ಇಂದು ಪ್ರಾಮುಖ್ಯ ಸಂಪರ್ಕ ಸಾಧನಗಳಾಗಿವೆ. ಅಟ್ಲಾಂಟಿಕ್ ಸಾಗರವು ಹಿಂದೆ ಯುರೊಪಿಯನ್ನರಿಗೆ ಪಶ್ಚಿಮಕ್ಕೆ ಹೋಗದಂತೆ ದೊಡ್ಡ ಪ್ರತಿ ಬಂಧಕವಾಗಿತ್ತು. ಇಂದು ಅದು ಪ್ರಪಂಚದ ಒಂದು ದೊಡ್ಡ ಹೆದ್ದಾರಿಯಾಗಿದೆ. ಹೀಗೆ ಪ್ರಪಂಚದಲ್ಲಿ ಸಂಪರ್ಕ ಸಾರಿಗೆಗಳಲ್ಲಾಗಿರುವ ಪ್ರಗತಿಯ ದೆಸೆಯಿಂದ ಅತ್ಯಂತ ದೂರದ ಪ್ರದೇಶವೂ ಕೂಡ ನೆರೆಮನೆಯಂತಾಗಿ ಬಿಟ್ಟಿದೆ. ಇಂದು ನಮಗೆ ಅಮೇರಿಕವು ಹತ್ತಿರವಾಗಿರುವಷ್ಟು ಅಂದು ರಾಜರಾಜ ಚೋಳನಿಗೆ ಮಧುರೆಯು ಹತ್ತಿರವಾಗಿರಲಿಲ್ಲ.

ಎರಡನೆಯದಾಗಿ ಇಂದು ಜಗತ್ತಿನ ಬೇರೆಬೇರೆ ಭಾಗಗಳು ಒಂದ ನ್ನೊಂದು ಬಹಳವಾಗಿ ಹೊಂದಿಕೊಂಡಿವೆ. ಉಷ್ಣವಲಯದ ಕೃಷ್ಯುತ್ಪನ್ನಗಳು ಸಮಶೀತೋಷ್ಣ ಪ್ರದೇಶದ ಕೈಗಾರಿಕೆಯ ರಾಷ್ಟ್ರಗಳಿಗೆ ಅವಶ್ಯ ಬೇಕು. ಕೈ ಗಾರಿಕೆಯ ರಾಷ್ಟ್ರಗಳ ಸಿದ್ಧ ವಸ್ತುಗಳು ಉಷ್ಣವಲಯದ ಕೃಷಿಪ್ರಧಾನ ದೇಶ ಗಳಿಗೆ ಬೇಕೇ ಬೇಕು. ಮಲಬಾರಿನ ಕಾಳುಮೆಣಸು, ಸಿಲೋನಿನ ಚಾ ಯುರೋಪಿಯನ್ನರಿಗೆ ಅತ್ಯಗತ್ಯ. ಹಾಗೆಯೇ ಬಂಗಾಳದ ಸೆಣಬು, ಮಲ ಯದ ರಬ್ಬರ್, ತವರಗಳು ಇಡೀ ಜಗತ್ತಿಗೇ ಬೇಕು. ಸೂಡಾನಿನ ಹತ್ತಿ

ಯಿಲ್ಲದೆ ಲಂಕೇಶಯರಿನ ಹತ್ತಿಗಿರಣಿಗಳು ನಡೆಯಲಾರವು. ಇಂತಹ ನಿದರ್ಶನಗಳನ್ನು ಎಷ್ಟು ಕೊಟ್ಟರೂ ಮುಗಿಯುವಂತಿಲ್ಲ. ಹೀಗಾಗಿ ನಮ್ಮ ಹಿರಿಯರು ಕನಸಿನಲ್ಲಿಯೂ ಕಂಡುಕೇಳದ ವಸ್ತುಗಳು ಇಂದು ಜಗತ್ತಿನ ಮೂಲೆ ಮೂಲೆಯಿಂದ ನಮ್ಮ ನಿತ್ಯ ಜೀವನಕ್ಕಾಗಿ ಒದಗಿ ನಿಂತಿರುತ್ತವೆ. ಈಗ ಇದನ್ನು ಬರೆಯುತ್ತಿರುವಾಗಲೇ ನನ್ನ ಸುತ್ತ ಎಷ್ಟು ವಸ್ತುಗಳು ಕಾಣಬರುತ್ತಿವೆ! ಈ ಫೌಂಟನ್‌ಪೆನ್ ಇಂಗ್ಲೆಂಡಿನಿಂದ ಬಂದಿದೆ. ಮೇಜಿನ ಮೇಲಿನ ದೀಪ ಅಮೇರಿಕದ ತಯಾರಿ. ಧರಿಸಿದ ಈ ಮಫ್ಲರ್ ಆಸ್ಟ್ರೇಲಿಯದ್ದು. ಕೈಗಡಿಯಾರ ಸ್ವಿಜರ್ಲೇಂಡಿನದ್ದು. ಅಲ್ಲೊಂದು ಸ್ವಿಜರ್‌ಲೇಂಡಿನ ಕೊಡೆ ಇದೆ. ಹೊರಗೆ ಇಂಗ್ಲೆಂಡಿನ ಬೈಸಿಕಲ್ ಇದೆ. ಇನ್ನೂ ಎಷ್ಟೋ ಇತರ ವಸ್ತುಗಳು ಎಷ್ಟೆಷ್ಟೋ ದೂರದಿಂದ ಬಂದು ಕುಳಿತುಬಿಟ್ಟಿವೆ. ಇವೆಲ್ಲಾ ಇಂದಿನ ಒಂದು ಸಾಮಾನ್ಯ ವ್ಯಕ್ತಿಯ ದೈನಿಕ ಆವಶ್ಯಕತೆಗಳು. ರಾಜರಾಜ ಚೋಳನ ಉಪಭೋಗಕ್ಕಾಗಿ ಕೂಡ ಇಷ್ಟೆಲ್ಲಾ ವಸ್ತುಗಳು ಇಷ್ಟು ದೂರ ದೂರದ ದೇಶಗಳಿಂದ ನೆರೆದಿರಲಿಲ್ಲ.

ಆದುದರಿಂದ ಇಂದಿನ ಜಗತ್ತು ಒಂದೇ ಘಟಕವಾಗಿದೆ. ರಾಷ್ಟ್ರಗಳೆಲ್ಲವೂ ಅದರ ಅಂಗಗಳಂತಿವೆ. ನಮ್ಮ ದೇಹದಲ್ಲಿ ಒಂದು ಕಿರಿಬೆರಳಿಗಾದ ನೋವೂ ಕೂಡಾ ಹೇಗೆ ಇಡೀ ದೇಹಕ್ಕೂ ಅನುಭವವಾಗುವುದೋ ಹಾಗೆಯೇ ಒಂದು ರಾಷ್ಟ್ರದಲ್ಲಾದ ಘಟನೆಯು— ಅದು ರಾಜಕೀಯವಿರಲಿ, ಸಾಮಾಜಿಕವಿರಲಿ, ಆರ್ಥಿಕವಿರಲಿ— ಜಗತ್ತಿನ ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮಗೊಳ್ಳುವುದು.

—

ಅಂತರ್ರಾಷ್ಟ್ರೀಯ ನೀತಿ.

"ನೀರಾವರಿ, ಜಲವಿದ್ಯುತ್, ಕೃಷಿಸಂಶೋಧನೆ, ಖನಿಜಗಳ ಶೋಧನೆ—ಇವುಗಳ ವಿಷಯ ಸಲಹೆ ಕೊಡಲು ಅಮೇರಿಕವು ಭಾರತಕ್ಕೆ ನಾಲ್ಕು ಜನ ತಜ್ಞರನ್ನು ಕಳುಹಿಸುತ್ತದೆ."

"ಆಗ್ನೇಯ ಏಷ್ಯಾದ ಅಭಿವೃದ್ಧಿಯ ಯೋಜನೆಗೆ ಬ್ರಿಟನ್ನು ಮುನ್ನೂರು ಮಿಲಿಯ ಪವನು ಮೀಸಲಾಗಿರಿಸಿದೆ."

"ಕೆನಡಾವು ಭಾರತಕ್ಕೆ ಎರಡು ಸಾವಿರ ಟನ್ ಗೋದಿ ದಾನಮಾಡಿತು."

"ಭಾರತವು ಬರ್ಮಾದ ಕೈಗಾರಿಕೆಯ ಅಭಿವೃದ್ಧಿಗೆ ಅವಶ್ಯವುಳ್ಳ ಧನ ಸಹಾಯ ಮಾಡುವುದು."

ಇಂತಹ ಸುದ್ದಿಗಳು ನಿತ್ಯನಿತ್ಯವೂ ವರ್ತಮಾನ ಪತ್ರಿಕೆಗಳಲ್ಲಿ ಬರುತ್ತಾ ಇರುತ್ತವೆ. ಇವುಗಳ ಅರ್ಥವೇನು? ರಾಷ್ಟ್ರಗಳು ಹೀಗೇಕೆ ಪರಸ್ಪರ ಔದಾರ್ಯವನ್ನು ತೋರಿಸುತ್ತಿವೆ? ನಿಜವಾಗಿಯೂ ರಾಷ್ಟ್ರಗಳೊಳಗೆ ಪರಸ್ಪರ ಅಷ್ಟೊಂದು ಪ್ರೇಮವಿದೆಯೇ? ವಿಚಾರ ಮಾಡೋಣ.

ಇಂದು ಜಗತ್ತಿನ ರಾಷ್ಟ್ರಗಳೆಲ್ಲಾ ಪರಸ್ಪರ ನಿಕಟ ಸಂಬಂಧವುಳ್ಳವುಗಳಾಗಿವೆ. ಅಂದಮೇಲೆ ಪ್ರತಿಯೊಂದು ರಾಷ್ಟ್ರವೂ ತನ್ನ ಯಾವುದೇ ವ್ಯವಹಾರವನ್ನು ನಡೆಸುವ ಮೊದಲು ಅದರಿಂದ ಇತರ ರಾಷ್ಟ್ರಗಳ ಮೇಲೆ ಎಂತಹ ಪರಿಣಾಮವಾಗುವುದು ಎಂಬುದರ ಕಡೆಗೆ ಲಕ್ಷ್ಯ ಕೊಡಬೇಕಾಗಿದೆ; ಏಕೆಂದರೆ ನಮ್ಮ ಜವಾಬ್ದಾರಿಯು ನಮ್ಮ ರಾಷ್ಟ್ರದ ಕಡೆಗಷ್ಟೇ ಅಲ್ಲದೆ ಇತರ ರಾಷ್ಟ್ರಗಳ ಕಡೆಗೂ ಇರುತ್ತದೆ. ನಮ್ಮ ನಡೆವಳಿಕೆಯ ಪರಿಣಾಮವು ಇತರ ರಾಷ್ಟ್ರಗಳ ಮೇಲೂ ಆಗುತ್ತದೆ. ನಮ್ಮ ನಡೆವಳಿಕೆಯಿಂದ ಯಾವುದಾದರೊಂದು ರಾಷ್ಟ್ರದ ಮೇಲೆ ದುಷ್ಪರಿಣಾಮವಾದರೆ ಅದರ ಕಹಿಫಲದಲ್ಲಿ ನಮಗೂ ಪಾಲು ಬರುವುದು. ಅನ್ಯ ರಾಷ್ಟ್ರಗಳ ಅಧಃಪತನದ ಮೂಲಕ ನಮ್ಮ ರಾಷ್ಟ್ರದ ಶ್ರೇಯಸ್ಸನ್ನು ಸಾಧಿಸುವ ಕಾಲವು ಎಂದೇ ಕಳೆದುಹೋಯಿತು. ಇಂದು ಅನ್ಯ ರಾಷ್ಟ್ರಗಳ ಏಳಿಗೆಯೇ ನಮ್ಮ ಏಳಿಗೆ; ಅನ್ಯ ರಾಷ್ಟ್ರಗಳ ಅವನತಿಯೇ

ನಮ್ಮ ಅವನತಿ.—ಹೀಗಿದೆ ರಾಷ್ಟ್ರಗಳ ಪರಸ್ಪರ ಬಾಂಧವ್ಯ.

ಆದರೂ ಎಷ್ಟೋಸಲ ರಾಷ್ಟ್ರಗಳು ಈ ಮೂಲಭೂತ ತತ್ವವನ್ನು ಮೀರಿ ನಡೆಯುತ್ತವೆ. ಅನ್ಯ ರಾಷ್ಟ್ರಗಳ ಹಿತವನ್ನು ಮುರಿದು ತನ್ಮೂಲಕ ತಮ್ಮ ಲಾಭವನ್ನು ಬೆಳೆಸಿಕೊಳ್ಳುವ ಯತ್ನ ನಡೆಸುತ್ತವೆ; ಮತ್ತು ಈ ಪ್ರಕೃತಿ ನಿಯಮವನ್ನು ಮೀರಿದ್ದಕ್ಕೆ ತಕ್ಕ ಶಾಸ್ತಿಯನ್ನೂ ಅನುಭವಿಸುತ್ತವೆ. ಬ್ರಿಟನ್ನು ಹಲವು ದೇಶಗಳನ್ನು ವಶಪಡಿಸಿಕೊಂಡು ಅವುಗಳ ಸಂಪತ್ತನ್ನು ಸೂರೆ ಹೊಡೆಯ ತೊಡಗಿತು. ಪರಿಣಾಮವಾಗಿ ಮೇಲಿಂದ ಮೇಲೆ ಯುದ್ಧಗಳಿಗೆ ಗುರಿಯಾಗಿ ತನ್ನ ವೈಭವವನ್ನೆಲ್ಲಾ ಕಳೆದುಕೊಂಡು ಇಂದು ಅಮೇರಿಕದ ಪ್ರಸಾದದಿಂದ ದಿನಗಳನ್ನು ನೂಕುತ್ತಿದೆ. ಜರ್ಮನಿಯೂ ತಾನೊಂದು ಶ್ರೇಷ್ಠ ಜನಾಂಗ, ಇತರ ಜನಾಂಗಗಳು ತನ್ನ ಸೇವೆಗಾಗಿ ಹುಟ್ಟಿವೆ ಎಂಬ ತತ್ವವನ್ನು ಆಚರಣೆಗೆ ತರಲೆತ್ನಿಸಿ ತನ್ನ ಇದ್ದ ಸಾಮ್ರಾಜ್ಯವನ್ನೂ ಕಳೆದುಕೊಂಡಿತು. ಇದೇ ರೀತಿ ಯಾವ ರಾಷ್ಟ್ರವಾದರೂ, ಎಷ್ಟೇ ಬಲಿಷ್ಟವಾದುದಾದರೂ, ಸ್ವಾರ್ಥದ ಪುಷ್ಟಿಗಾಗಿ ಪರಾರ್ಥವನ್ನು ನಾಶಮಾಡಿ ಏಳಿಗೆಯನ್ನೈದಿದುದಿಲ್ಲ; ಬದಲಾಗಿ ಅವನತಿಯನ್ನೇ ಹೊಂದಿವೆ.

ಇದಕ್ಕೆ ಕಾರಣವೇನೆಂದರೆ ರಾಷ್ಟ್ರಗಳಿಗೂ ಕೂಡಾ ವ್ಯಕ್ತಿಗಳಿಗಿರುವಂತೆಯೇ ಒಂದು ನೀತಿಮಾರ್ಗವಿದೆ. ಹೇಗೆ ವ್ಯಕ್ತಿಗಳು ಸಮಾಜದಲ್ಲಿ ನೀತಿಪಥವನ್ನು ತ್ಯಜಿಸಿದರೆ ಅಧಃಪಾತವನ್ನು ಹೊಂದುವರೋ ಹಾಗೆಯೇ ರಾಷ್ಟ್ರಗಳಾದರೂ ರಾಷ್ಟ್ರಗಳ ಬಳಗದಲ್ಲಿ ನೀತಿಮಾರ್ಗವನ್ನು ಬಿಟ್ಟು ನಡೆದರೆ ಅವನತಿಯನ್ನು ಹೊಂದುವುವು.

ಕ್ರಿ. ಶ. 1931ರಲ್ಲಿ ಜಪಾನು ಮಂಚೂರಿಯುವನ್ನು ಆಕ್ರಮಿಸಿತು. ಆಗ ಬ್ರಿಟನ್ನು ಜಪಾನಿನ ಉಕ್ಕಿ ಹರಿಯುತ್ತಿರುವ ಜನಸಂಖ್ಯೆಗೆ ಮಂಚೂರಿಯದಲ್ಲಿ ಎಡೆದೊರೆಯುವುದು ತನಗೆ ಕ್ಷೇಮಕರವೆಂದು ಭಾವಿಸಿತು; ಏಕೆಂದರೆ ಆಗ ಜಪಾನು ತನ್ನ ಸಾಮ್ರಾಜ್ಯದತ್ತ ಕಣ್ಣು ಹಾಕದಿರಬಹುದು; ತನ್ನ ಜನವಿರಳವಾದ ಹಾಗೂ ವಿಶಾಲವಾದ ಆಸ್ಟ್ರೇಲಿಯವು ಸುರಕ್ಷಿತವಾಗಿ ಇರಬಹುದು ಎಂದು ಲೆಕ್ಕ ಹಾಕಿತು. ಅಲ್ಲದೆ ದೂರದ ಮೂಲೆಯ ಮಂಚೂರಿಯಕ್ಕಾಗಿ

ತಾನು ಪ್ರಬಲ ಜಪಾನಿನೊಡನೆ ಏಕೆ ನಿಷ್ಠೂರ ಕಟ್ಟಿಕೊಳ್ಳಬೇಕು ಎಂದೂ ಎಣಿಸಿತು. ಅಂತೆಯೇ ಜನಾಂಗಸಂಘದಲ್ಲಿ ಜಪಾನನ್ನು ಅದು ಖಂಡಿಸಲಿಲ್ಲ; ಬದಲಾಗಿ ಬೆಂಬಲಕೊಟ್ಟಿತು. ಇದನ್ನು ನೋಡಿ ಕ್ರಿ. ಶ. 1935ರಲ್ಲಿ ಇಟಲಿಯ ಮುಸೋಲಿನಿಯು ಇತಿಯೋಪಿಯದ ಮೇಲೆ ಬಿದ್ದನು. ಹಾಗೆಯೇ ಕ್ರಿ. ಶ. 1939ರಲ್ಲಿ ಜರ್ಮನಿಯ ಹಿಟ್ಲರನು ಪೋಲೆಂಡಿನ ಮೇಲೆ ಬಿದ್ದನು. ಈಗ ಬ್ರಿಟನ್ನು ತನ್ನ ಪ್ರಾಣಕ್ಕೋಸ್ಕರ ಕಾದಾಡಬೇಕಾಯಿತು.

ಇದೇ ರೀತಿ ಕ್ರಿ. ಶ. 1938ರಲ್ಲಿಯೂ ಬ್ರಿಟನ್ನು ತನ್ನ ಕರ್ತವ್ಯವನ್ನು ತಪ್ಪಿಸಿಕೊಳ್ಳಲೆತ್ನಿಸಿ ಮುಂದೆ ಭಯಂಕರ ಶಿಕ್ಷೆಗೆ ಗುರಿಯಾಯಿತು. ಜರ್ಮನಿಯ ಹಿಟ್ಲರನು ಜಕೊಸ್ಲೊವಾಕಿಯದ ಕೆಲವು ಭಾಗ ತನಗೆ ಸಿಗಬೇಕೆಂದು ಗರ್ಜಿಸಿದನು. ಆಗ ಬ್ರಿಟಿಷ್ ಪ್ರಧಾನಿ ನೆವಿಲ್ ಚೆಂಬರ್ಲೇನನು ಮ್ಯುನಿಕ್ ಎಂಬಲ್ಲಿಗೆ ಧಾವಿಸಿ ಹಿಟ್ಲರನೊಡನೆ ಒಪ್ಪಂದ ಮಾಡಿಕೊಂಡು ಜಕೊಸ್ಲೊವಾಕಿಯದಲ್ಲಿ ಅವನು ಕೇಳಿದ ಭಾಗವನ್ನು ಅವನಿಗೆ ಕೊಡಿಸಿದನು. ಅಂತೂ ಯುದ್ಧವನ್ನು ತಪ್ಪಿಸಿದನು. ಆದರೆ ಆರು ತಿಂಗಳೊಳಗೆ ಹಿಟ್ಲರನು ಇಡೀ ಜಕೊಸ್ಲೊವಾಕಿಯವನ್ನು ನುಂಗಿಬಿಟ್ಟನು. ಮತ್ತಾರು ತಿಂಗಳೊಳಗೆ ಅವನೊಡನೆ ಯುದ್ಧ ಗಂಟಿಕ್ಕಿತು. ಈಗ ಅದೇ ಜಕೊಸ್ಲೊವಾಕಿಯದ ಕೈಗಾರಿಕೆಯಿಂದ ಹಿಟ್ಲರನು ಕೊಬ್ಬಿಹೋಗಿದ್ದನು. ಬ್ರಿಟಿಷರ ಕಡೆಯಿಂದ ಕಾದಲು ಮುಂಬರುತಿದ್ದ ಜಕೊಸ್ಲೊವಾಕಿಯದ ಮೂವತ್ತು ಡಿವಿಜನ್ ಸೇನೆ ಹಿಟ್ಲರನ ಕೈಯಲ್ಲಿತ್ತು. ಮೇಲಾಗಿ ಅಂದು ಯುದ್ಧಕ್ಕೆ ಹೋಗಿದ್ದರೆ ಜಕೊಸ್ಲೊವಾಕಿಯದಂತಹ ಅನ್ಯರಾಷ್ಟ್ರದ ರಕ್ಷಣೆಗಾಗಿ ಧಾವಿಸಿದ ಖ್ಯಾತಿಯು ಬ್ರಿಟನ್ನಿಗೆ ಬರುತಿತ್ತು. ಈಗಲಾದರೋ ಕೇವಲ ತನ್ನನ್ನು ಉಳಿಸಿಕೊಳ್ಳುವ ಸಲುವಾಗಿ ಯುದ್ಧಮಾಡುವಂತಹ ತೀರಾ ಸಾಮಾನ್ಯ ಉದ್ದೇಶ ಮಾತ್ರ ಉಳಿಯಿತು. ಎಷ್ಟು ಸಾಂಪತ್ತಿಕ ನಷ್ಟ! ಎಂತಹ ನೈತಿಕಪತನ! ಅಂತೆಯೇ ಮುಂದೆ ಯುದ್ಧದಲ್ಲಿ ಬ್ರಿಟನ್ನು ಉಳಿಯುವುದೇ ಅನುಮಾನವೆಂಬಷ್ಟು ಕಷ್ಟವಾಯಿತು.

ರಷ್ಯವೂ ಇದೇ ರೀತಿ ಬುದ್ಧಿವಂತಿಕೆ ತೋರಿಸಹೋಗಿ ಚೆನ್ನಾಗಿ ಕೈ ಸುಟ್ಟುಕೊಂಡಿದೆ. ಕ್ರಿ. ಶ. 1939ರಲ್ಲಿ ಅದು ಹಿಟ್ಲರನ ಕೂಡೆ ಅನಾ

ಕ್ರಮಣ ಒಪ್ಪಂದ ಮಾಡಿಕೊಂಡು ಅವನು ಇಂಗ್ಲೆಂಡ್, ಫ್ರಾನ್ಸುಗಳೊಡನೆ ಯುದ್ಧಮಾಡಲು ಅನುವು ಮಾಡಿಕೊಟ್ಟಿತು. ರಷ್ಯವು ತನ್ನ ಮೇಲೆ ಬೀಳುವು ದಿಲ್ಲವೆಂದು ತಿಳಿದೊಡನೆಯೇ ಅವನು ಇಂಗ್ಲೆಂಡ್, ಫ್ರಾನ್ಸುಗಳ ಮೇಲೆ ಬಿದ್ದನು. ನಂತರ ಯುರೋಪನ್ನೆಲ್ಲಾ ಗೆದ್ದು ವಿಶೇಷ ಬಲಗೂಡಿಸಿಕೊಂಡು ರಷ್ಯದ ಮೇಲೂ ಬಿದ್ದನು. ಇದರಿಂದ ರಷ್ಯಕ್ಕೆ ಅಪಾರ ಹಾನಿಯುಂಟಾ ಯಿತು.

ಆದುದರಿಂದ ರಾಷ್ಟ್ರಗಳೂ ಕೂಡ ವ್ಯಕ್ತಿಗಳಂತೆಯೇ ನೀತಿಮಾರ್ಗ ವನ್ನು ಬಿಡಕೂಡದು. ಸಮಾಜದಲ್ಲಿ ವ್ಯಕ್ತಿಗಳಿಗೆ ಇಲ್ಲದ ಹಕ್ಕುಗಳು ರಾಷ್ಟ್ರ ಗಳಿಗೆ ರಾಷ್ಟ್ರಗಳ ಬಳಗದಲ್ಲಿ ಇರಬಾರದು. ಸಮಾಜದಲ್ಲಿ ವ್ಯಕ್ತಿಗಳ ಸ್ವಾತಂತ್ರ್ಯವು ಮರ್ಯಾದಿತವಿದ್ದು, ಇತರ ವ್ಯಕ್ತಿಗಳ ಹಿತಸಂಬಂಧಕ್ಕೆ ಅಡ್ಡಿ ಯಾಗಿರುವುದಿಲ್ಲ. ಹಾಗೆಯೇ ರಾಷ್ಟ್ರಗಳೂ ಕೂಡಾ ಅನ್ಯರಾಷ್ಟ್ರಗಳ ಹಿತಕ್ಕೆ ಭಂಗ ತರುವಂತೆ ವರ್ತಿಸಬಾರದು. ಬದಲಾಗಿ ಹೀನಸ್ಥಿತಿಯಲ್ಲಿರುವ ರಾಷ್ಟ್ರ ಗಳನ್ನು ಏಳಿಗೆಗೆ ತರಲು ಪ್ರಯತ್ನಿಸಬೇಕು. ಇದರಿಂದ ಪರಸ್ಪರ ವ್ಯಾಪಾರ ಹೆಚ್ಚುವುದು. ರಾಷ್ಟ್ರಗಳ ಸಂಪತ್ತು ಬೆಳೆಯುವುದು. ಜನರ ಜೀವನದ ಮಟ್ಟ ಏರುವುದು. ಆದುದರಿಂದಲೇ ಅಮೇರಿಕದ ಅಧ್ಯಕ್ಷ ಟ್ರೂಮನನು "ನಾಲ್ಕನೇ ಅಂಕಿನ ಕಾರ್ಯಕ್ರಮ" ಎಂಬ ಯೋಜನೆಯನ್ನು ತಯಾರಿಸಿ ಅದರ ಪ್ರಕಾರ ಹಿಂದುಳಿದ ರಾಷ್ಟ್ರಗಳಿಗೆ ಭಂಡವಾಳ, ಯಂತ್ರಗಳು, ತಾಂತ್ರಿಕ ಸಲಹೆ, ಇವುಗಳನ್ನು ಒದಗಿಸುತ್ತಿರುವನು. ಇತರ ರಾಷ್ಟ್ರಗಳೂ ಕೂಡ ಇದೇ ರೀತಿ ಪರಸ್ಪರ ಸಹಾಯ ಮಾಡುತ್ತಿವೆ.

—

ವಿಶ್ವಶಾಂತಿ.

ಶ್ರೀ..................ಮತ್ತು ನಾನು ಸಿನೆಮಾಕ್ಕೆ ಹೋಗುವುದೆಂದು ನಿಶ್ಚಯಿಸಿದೆವು. ಯಾವ ಚಿತ್ರಕ್ಕೆ ಹೋಗುವುದು ಎಂಬ ಬಗ್ಗೆ ಚರ್ಚೆಯಾಯಿತು. ಶ್ರೀ...............ಯ ಹೇಳಿಕೆ ನಾವು "ಹರಿಶ್ಚಂದ್ರ" ಚಿತ್ರಕ್ಕೆ ಹೋಗಬೇಕು ಎಂದು. ನನ್ನ ಹಟ "ಸಾಜನ್" ನೋಡಬೇಕು ಎಂದು. ಕೊನೆಗೆ ರಾ............ನು ಬಂದು ರಾಜಿ ಮಾಡಿಸದಿರುತಿದ್ದರೆ ಪರಿಸ್ಥಿತಿ ತುಸು ಬಿಗಿಯೇ ಆಗುತಿದ್ದಿತು.

ಹೀಗೆ ಒಂದು ಸಿನೆಮಾ ನೋಡುವ ವಿಷಯದಲ್ಲಿಯೂ ಆಪ್ತಮಿತ್ರರಿಬ್ಬರೊಳಗೆ ಇಷ್ಟು ಭಿನ್ನಾಭಿಪ್ರಾಯವೆದ್ದಿತು. ಜನರು ಎಷ್ಟೇ ಒಮ್ಮನಸ್ಸಿನಿಂದಿರಲಿ, ಎಷ್ಟೇ ನೀತಿವಂತರಾಗಿರಲಿ, ಅವರೊಳಗೆ ಭಿನ್ನಾಭಿಪ್ರಾಯಗಳು ಬಂದೇ ಬರುತ್ತವೆ. ಆದರೆ ಅದಕ್ಕಾಗಿ ಅವರು ಒಬ್ಬರೊಡನೊಬ್ಬರು ಹೊಡೆದಾಡುವುದಲ್ಲ. ಶಾಂತ ರೀತಿಯಿಂದಲೇ ಬಗೆಹರಿಸಿಕೊಳ್ಳಬೇಕು. ಸಾಧ್ಯವಿದ್ದರೆ ತಮ್ಮೊಳಗೆ ವಿಚಾರ ವಿನಿಮಯದಿಂದ ಇತ್ಯರ್ಥಪಡಿಸಿಕೊಳ್ಳಬೇಕು. ಅದು ಸಾಧ್ಯವಾಗದಿದ್ದರೆ ಮೂರನೆಯವರ ಮಧ್ಯಸ್ಥಿಕೆಯನ್ನು ಉಪಯೋಗಿಸಿಕೊಳ್ಳಬೇಕು. ಅದೂ ಸಾಧ್ಯವಾಗದಿದ್ದಲ್ಲಿ ಪಂಚಾಯಿತಿಯಿಂದ ಇಲ್ಲವೆ ನ್ಯಾಯಾಲಯಗಳ ಮೂಲಕ ಇತ್ಯರ್ಥ ಪಡಿಸಿಕೊಳ್ಳಬೇಕು. ಅಂತೂ ಹೊಡೆದಾಡುವುದಲ್ಲ; ಏಕೆಂದರೆ ಹೊಡೆದಾಟದಲ್ಲಿ ಜಯಿಸಿದ ಪಕ್ಷದ ವಾದವು ಸತ್ಯವೆಂದು ಸಿದ್ಧವಾಗುವುದಿಲ್ಲ.

ರಾಷ್ಟ್ರಗಳೊಳಗೂ ಇದೇ ರೀತಿ ಭಿನ್ನಾಭಿಪ್ರಾಯಗಳುಂಟಾಗುತ್ತವೆ. ಆದರೆ ಅವುಗಳು ಈ ರೀತಿ ವಿಚಾರ ವಿನಿಮಯ, ಮಧ್ಯಸ್ಥಿಕೆ, ಪಂಚಾಯಿತಿ ಅಥವಾ ನ್ಯಾಯಾಲಯಗಳ ಮೂಲಕ ಶಾಂತರೀತಿಯಿಂದಲೇ ತಮ್ಮ ವಿವಾದಗಳನ್ನು ಬಿಡಿಸಿಕೊಳ್ಳುವುದಿಲ್ಲ. ಅವುಗಳು ತಮ್ಮ ಪಕ್ಷ ಸಾಧನೆಗಾಗಿ ಯುದ್ಧ ಮಾಡುತ್ತವೆ. ಆದರೆ ಯುದ್ಧವು ಯಾವ ಪ್ರಶ್ನೆಯನ್ನೂ ಇತ್ಯರ್ಥ ಪಡಿಸಲಾರದು. ಯುದ್ಧದಿಂದಾದ ತೀರ್ಮಾನವು ಎಂದೂ ಶಾಶ್ವತವಲ್ಲ; ಏಕೆಂದರೆ ಯುದ್ಧದಲ್ಲಿ ಸೋತ ರಾಷ್ಟ್ರವು ತಿರುಗಿ ಬಲಗೂಡಿಸಿಕೊಂಡು ತನ್ನ

ಕಾರ್ಯಸಾಧನೆಗೆ ಯತ್ನಿಸುತ್ತದೆ. ಹೀಗೆ ಸೇಡು—ಪ್ರತಿ ಸೇಡಿನ ಹುಚ್ಚು ಹೊನಲು ಹರಿಯತೊಡಗುತ್ತದೆ.

ಫ್ರಾನ್ಸಿನ ಈಶಾನ್ಯಗಡಿಯಲ್ಲಿ ಎಲ್ಸೇಸ್ ಮತ್ತು ಲೊರ್‍ರೇನ್ ಎಂಬ ಎರಡು ಪ್ರಾಂತ್ಯಗಳಿವೆ. ಇವುಗಳನ್ನು ಕ್ರಿ. ಶ. 1870ರಲ್ಲಿ ಜರ್ಮನಿಯು ಕಿತ್ತುಕೊಂಡಿತು. ಫ್ರಾನ್ಸು ಅವುಗಳ ಬಗ್ಗಾಗಿ ಯಾವಾಗಲೂ ಪರಿತಪಿಸುತ್ತಲೇ ಇತ್ತು., ಕೊನೆಗೆ ಕ್ರಿ. ಶ. 1918ರಲ್ಲಿ ಜರ್ಮನಿಯು ಪ್ರಥಮ ಜಾಗತಿಕ ಯುದ್ಧದಲ್ಲಿ ಸೋತು ಶರಣಾಗತವಾದಾಗ ಫ್ರಾನ್ಸು ಈ ಪ್ರಾಂತ್ಯಗಳನ್ನು ತಿರುಗಿ ವಶಪಡಿಸಿಕೊಂಡಿತು. ಕ್ರಿ. ಶ. 1940ರಲ್ಲಿ ದ್ವಿತೀಯ ಜಾಗತಿಕ ಯುದ್ಧದಲ್ಲಿ ಫ್ರಾನ್ಸು ಹಿಟ್ಲರನನ್ನು ಎದುರಿಸಲಾರದೆ ಸೋತಿತು. ಆಗ ಹಿಟ್ಲರನು ಈ ಎರಡು ಪ್ರಾಂತ್ಯಗಳನ್ನು ತೆಗೆದು ತಿರುಗಿ ಜರ್ಮನಿಗೆ ಸೇರಿಸಿಕೊಂಡನು. ಕೊನೆಗೆ ಹಿಟ್ಲರನು ಮಡಿದು ಜರ್ಮನಿಯ ಪತನವಾದಾಗ ಫ್ರಾನ್ಸು ತನ್ನ ಈ ಎರಡು ಪ್ರಾಂತ್ಯಗಳನ್ನು ಮರಳಿ ಪಡೆಯಿತು. ಇನ್ನೆಷ್ಟು ಕಾಲ ಇವು ಫ್ರಾನ್ಸಿನ ವಶ ಇರುತ್ತವೆಂಬುದನ್ನು ನೋಡಬೇಕಾಗಿದೆ.

ಆದುದರಿಂದ ಯುದ್ಧವು ವಿವಾದಗಳನ್ನು ತೀರ್ಮಾನಿಸಲು ಯೋಗ್ಯ ಮಾರ್ಗವೇ ಅಲ್ಲ. ಅದು ಒಂದು ಪ್ರಶ್ನೆಯನ್ನು ಬಿಡಿಸಹೋಗಿ ಹಲವು ಹೊಸ ಪ್ರಶ್ನೆಗಳನ್ನು ಉಂಟುಮಾಡುತ್ತದೆ.

ಹಾಗಾದರೆ ಯುದ್ಧಗಳು ಏಕೆ ಉಂಟಾಗುತ್ತವೆ? ಅವು ಅಗತ್ಯವೇ? ಎಂದು ವಿಚಾರ ಮಾಡೋಣ.

ಹಿಂದಿನ ಕಾಲದಲ್ಲಿ ರಾಜ್ಯ ವಿಸ್ತರಿಸಲು, ಇಲ್ಲವೆ ಮತ ಪ್ರಚಾರಕ್ಕಾಗಿ ಯುದ್ಧಗಳಾಗುತ್ತಿದ್ದುವು. ಈಗ ಅಂತಹ ಉದ್ದೇಶಗಳಿಗಾಗಿ ಯಾರೂ ಯುದ್ಧ ಮಾಡುವುದಿಲ್ಲ. ಹಾಗೆಯೇ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಹಿತವನ್ನು ಸೂರೆಗೊಳ್ಳಲೋಸುಗವೂ ಯುದ್ಧ ಮಾಡಲಾರದು. ಏಕೆಂದರೆ ಈ ಬಗೆಯ ಯುದ್ಧವನ್ನು ಜಗತ್ತಿನ ಸಾರ್ವಜನಿಕಾಭಿಪ್ರಾಯವು ಈಗ ಮೆಚ್ಚುವುದಿಲ್ಲ.

ಈಗ ರಾಷ್ಟ್ರಗಳೊಳಗಿನ ವಿವಾದಗಳನ್ನು ಇತ್ಯರ್ಥಪಡಿಸಲು ಯುದ್ಧ

ಗಳಾಗುತ್ತವೆ. ಆದರೆ ಯಾವ ವಿವಾದವನ್ನೇ ಆಗಲಿ ಎರಡೂ ಪಕ್ಷಗಳ ಹಿತಕ್ಕೆ ಅನುಕೂಲವಾಗುವಂತೆ ಇತ್ಯರ್ಥ ಪಡಿಸಿದರೆ ಮಾತ್ರ ಸಾರ್ಥಕ. ಅಂದರೆ ಎರಡೂ ಪಕ್ಷಗಳೂ ಒಪ್ಪುವಂತಹ ತೀರ್ಮಾನವಾಗಬೇಕು. ಇದಕ್ಕೆ ಯುದ್ಧವು ಬೇಕಿಲ್ಲ

ಆದರೂ ಒಂದು ವಿವಾದದಲ್ಲಿ ಒಂದು ರಾಷ್ಟ್ರದ ಹಿತಕ್ಕೆ ತೀರಾ ವಿರುದ್ಧವಾಗಿ ಇನ್ನೊಂದರ ಹಿತವಿರಬಹುದು. ಆಗ ಒಂದಿಲ್ಲೊಂದರ ಹಿತವನ್ನು ಬಲಿಗೊಡಲೇ ಬೇಕಾಗುತ್ತದೆ. ಆದರೆ ಅಲ್ಲಿಯೂ ಕೂಡ ಶಾಂತಿ ಮಾರ್ಗದಿಂದಲೇ ತೀರ್ಮಾನ ಸಾಧ್ಯ. ಎರಡೂ ರಾಷ್ಟ್ರಗಳಲ್ಲಿ ಒಂದರ ಏಳಿಗೆಯೇ ಇನ್ನೊಂದರ ಏಳಿಗೆ ಎಂದಾದ ಮೇಲೆ ಯಾವುದರ ಹಿತವನ್ನು ಬಲಿಗೊಟ್ಟರೂ ಚಿಂತೆಯಿಲ್ಲ; ಏಕೆಂದರೆ ತನ್ನ ಹಿತವನ್ನು ಬಲಿಗೊಟ್ಟ ರಾಷ್ಟ್ರದ ಏಳಿಗೆಯನ್ನು ಸಾಧಿಸುವ ಜವಾಬ್ದಾರಿಯು ಆ ಇನ್ನೊಂದು ರಾಷ್ಟ್ರದ ಮೇಲೆ ಬೀಳುತ್ತದೆ. ನನಗಾಗಿ ನನ್ನ ಮಿತ್ರನೊಬ್ಬನು ಸಂಕಟಕ್ಕೆ ಗುರಿಯಾದರೆ ಅವನನ್ನು ಪಾರು ಮಾಡಬೇಕಾದುದು ನನ್ನ ಕರ್ತವ್ಯವಾಗುತ್ತದೆ. ತ್ಯಾಗದಿಂದ ಪಡೆದ ಹಕ್ಕುಗಳು ಬಲಧಿಂದ ಅಥವಾ ಕಾನೂನಿನಿಂದ ಪಡೆದ ಹಕ್ಕುಗಳಿಗಿಂತ ಎಷ್ಟೋ ಹೆಚ್ಚು ಪರಿಣಾಮಕರ. ಅಂತೂ ಹೇಗೆ ನೋಡಿದರೂ ರಾಷ್ಟ್ರಗಳೊಳಗಿನ ವ್ಯವಹಾರಕ್ಕೆ ಯುದ್ಧವು ಅಗತ್ಯವಿಲ್ಲ.

ಹೀಗಿದ್ದರೂ ಯುದ್ಧಗಳು ಆಗುತ್ತಲೇ ಇವೆ, ಮತ್ತು ಅಪಾರ ಹಾನಿಯನ್ನು ಉಂಟುಮಾಡುತ್ತಿವೆ. ಇಂದು ಯುದ್ಧವು ಅತಿ ಭೀಕರವಾಗಿದೆ. ಕೋಟಿಗಟ್ಟಲೆ ಜನರು ಭಯಂಕರ ಸಾವು ನೋವುಗಳಿಗೀಡಾಗುವರು. ವಿಮಾನ ದಾಳಿಗಳ ದೆಸೆಯಿಂದ ಯುದ್ಧದಲ್ಲಿ ಭಾಗ ವಹಿಸದ ನಾಗರಿಕ ಜನರಿಗೂ ಸಾವು ನೋವುಗಳು ಬಂದು ಬಡಿಯುತ್ತವೆ. ಮನೆಮಾರೆಲ್ಲಾ ಪುಡಿಯಾಗುತ್ತವೆ. ಜಪಾನಿನ ಹಿರೋಷಿಮಾದಲ್ಲಿ ಒಂದು ಆಟಂ ಬೊಂಬು ನಲ್ವತ್ತು ಸಾವಿರ ಜನರನ್ನು ಒರಸಿಬಿಟ್ಟಿತು. ಇಷ್ಟು ಸಾಲದೆಂಬಂತೆ ದಿನ ದಿನವೂ ಹೆಚ್ಚು ಹೆಚ್ಚು ವಿನಾಶಕಾರಕ ಆಯುಧಗಳ ಶೋಧವಾಗುತ್ತಿದೆ. ನಿಜವಾಗಿಯೂ ಇನ್ನೊಂದು ಯುದ್ಧವಾದರೆ ಮಾನವಕುಲವೇ ನಾಶವಾಗಿ ಬಿಡುವುದು.

ಈ ಬಗೆಯ ಸಾವು ನೋವುಗಳ ಹಿಂದೆ ಎಷ್ಟು ಮಾನಸಿಕ ಯಾತನೆ ಇದೆ? ಎಷ್ಟೋ ಸಂಸಾರಗಳು ದಿಕ್ಕೆಟ್ಟು ಹೋಗುತ್ತವೆ. ಎಷ್ಟೋ ತರುಣರು ಕಣ್ಣೋ, ಕೈಕಾಲುಗಳನ್ನೋ ಕಳೆದುಕೊಂಡು ವಿರೂಪದ ಬಾಳ್ವೆ ಮಾಡಬೇಕಾಗುತ್ತದೆ. ಎಷ್ಟೋ ತರುಣತರುಣಿಯರು ದುರಾಚಾರಗಳಿಗೆ ಬಲಿಬೀಳುವರು. ಇಷ್ಟೆಲ್ಲಾ ಸರಳಾಟದಿಂದ ಸಾಧಿಸುವುದಾದರೂ ಏನನ್ನು? ಉತ್ತರವಿಲ್ಲ.

ಇವರ ಮೇಲೆ ಒಂದೊಂದು ಯುದ್ಧದಲ್ಲಿ ಎಷ್ಟೊಂದು ಹಣ, ಸಾಮಗ್ರಿಗಳು ವ್ಯರ್ಥ ವ್ಯಯವಾಗುತ್ತವೆ? ಶಾಂತಿಕಾಲದಲ್ಲಿಯೂ ಯುದ್ಧದ ತಯಾರಿಗಾಗಿ ಎಷ್ಟು ಹಣ, ಸಾಮಗ್ರಿ ವಿನಿಯೋಗವಾಗುತ್ತಿವೆ? ಸರ್ವಸಾಮಾನ್ಯವಾಗಿ ಪ್ರತಿ ರಾಷ್ಟ್ರದ ಆಯುವ್ಯಯದ ಪಟ್ಟಿಯಲ್ಲಿ ಅರ್ಧಾಂಶ ಈ ವಿಧ್ವಂಸಕ ಚಟುವಟಿಕೆಗಾಗಿ ಮೀಸಲಾಗಿರುತ್ತದೆ. ರಾಷ್ಟ್ರದ ಉತ್ಪಾದನೆಯಲ್ಲಿಯು ಅತ್ಯುತ್ತಮ ಭಾಗ ಸೇನಾಸರಬರಾಯಿಗೆ ಮುಡಿಪಾಗಿದೆ. ಹೀಗೆ ವ್ಯರ್ಥ ಅಪವ್ಯಯವಾಗುತ್ತಿರುವ ಸಂಪತ್ತನ್ನು ಜನಸಾಮಾನ್ಯರ ಉಪಯೋಗಕ್ಕೆ ಹಚ್ಚಲು ಸಾಧ್ಯವಾಗುತಿದ್ದರೆ ಜನರ ಜೀವನದ ಮಟ್ಟ ಎಷ್ಟೊಂದು ಏರುತಿತ್ತು?

ಸಂಜೆಯ ಹೊತ್ತು. ಮೈದಾನದತ್ತ ಹೋಗಿದ್ದೆ. ಅಲ್ಲೇ ಸಮೀಪದಲ್ಲಿ ದಿನಗೂಲಿಯವನೊಬ್ಬನ ಜೋಪಡಿ ಇತ್ತು. ನಡುವರಿಯದವನೊಬ್ಬನು ದೇಕುತ್ತ ನೆಲದ ಮೇಲೆ ಕುಳಿತಿದ್ದನು. ಕಾಮಾಲೆ ರೋಗದಿಂದ ಕಾಲು, ಕಣ್ಣುಗಳು ಊದಿಕೊಂಡಿವೆ. ಕೊಳಕು ಚಿಂದಿ ಬಟ್ಟೆಗಳು ಮೈಯನ್ನು ಅರ್ಧಮರ್ಧ ಮುಚ್ಚಿವೆ, ಎರಡು ಮಕ್ಕಳು ಅಲ್ಲೇ ಸಲ್ಪ ದೂರದಲ್ಲಿ ಒಂದು ತಿಂಡಿ ಚೂರಿಗಾಗಿ ಜಗಳಾಡುತ್ತಿದ್ದವು. ಅವುಗಳ ತಾಯಿಯು ಅದನ್ನು ಯಾವುದೋ ಹೋಟೆಲಿನ ಹಿಂಬಾಗಿಲಿನಲ್ಲಿಯ ಎಂಜಲು ಕುಪ್ಪೆಯಿಂದ ಎತ್ತಿ ತಂದಿರಬೇಕು. ಮಕ್ಕಳ ಮೈ ಮಂಡೆಯೆಲ್ಲಾ ಕೊಳೆಯಿಂದ ತುಂಬಿದೆ. ಅವುಗಳ ತಾಯಿಯು ಸಮೀಪದ ಗುಮ್ಮಿಯಿಂದ ಒಂದು ಕೊಡ ನೀರನ್ನು ತಂದಳು. ಒಂದು ಮಣ್ಣಿನ ಕೋರಕೆಯಲ್ಲಿ ಒಬ್ಬೊಬ್ಬರಾಗಿ ಒಂದೊಂದು ಹಿಡಿ ಕೂಳನ್ನು ತಿಂದು ಕೈ ಒರಸಿಕೊಂಡರು. ಕೊಡದಿಂದ ಸ್ವಲ್ಪ ನೀರನ್ನು ಒಂದು ಕರಟಕ್ಕೆ ಬಸಿದು ಎಲ್ಲರೂ ಕುಡಿದರು. ನಂತರ ಚಿಂದಿ ಚಾಪೆಗಳನ್ನು

ನೆಲದ ಮೇಲೆ ಹರವಿ ಎಲ್ಲರೂ ಮಲಗಿಕೊಂಡರು. ದೀಪ ಹಚ್ಚುವ ಗೊಡವೆಗೇ ಹೋಗಲಿಲ್ಲ. ಮಾಡಿನ ಸೂರಿನಲ್ಲಿಯ ಕಂಡಿಗಳ ಮೂಲಕ ಚಂದ್ರ ಕಿರಣಗಳು ಒಳನುಗ್ಗಿ ಕತ್ತಲೆಯೊಡನೆ ವ್ಯರ್ಥ ಸೆಣಸಾಡುತಿದ್ದುವು.

ಇವರೇಕೆ ಹೀಗೆ ಇರಬೇಕು? ಕೇವಲ ಮೊನ್ನಿನ ಒಂದು ಯುದ್ಧಕ್ಕೆ ಖರ್ಚಾದ ಹಣವನ್ನು ಇಂತಹ ಬಡಬಗ್ಗರಿಗೆ ಹಂಚಿದ್ದರೆ ಇವರ ಸ್ಥಿತಿ ಹೇಗೆ ಇರುತಿತ್ತು? ಅಚ್ಚುಕಟ್ಟಾದ ಮನೆ; ಅದರಲ್ಲಿ ಆ ಗಂಡಸು ಆರಾಮು ಕುರ್ಚಿಯಲ್ಲಿ ಕುಳಿತುಕೊಂಡು ವರ್ತಮಾನ ಪತ್ರಿಕೆಗಳನ್ನು ಓದುತಿದ್ದನು. ವಿದ್ಯುದ್ದೀಪದ ಬೆಳಕು ಅವನ ತುಂಬಿದ ಗಲ್ಲದ ಮೇಲೆ ನಲಿಯುತಿತ್ತು. ಮಕ್ಕಳೆರಡು ಮಾರನೆ ದಿನದ ಪಾಠದ ತಯಾರಿಯಲ್ಲಿ ಮಗ್ನರಾಗಿರುತಿದ್ದರು. ಅವರ ತಾಯಿಯು ಉಟ್ಟ ಪತ್ತಲಿನ ಸೆರಗನ್ನು ಸಂವರಿಸಿಕೊಳ್ಳುತ್ತಾ, ಹೊಳೆಯುವ ಗಿಂಡಲಿನಲ್ಲಿ ತಂಪು ಪಾನೀಯವನ್ನು ಗಂಡನಿಗೆ ತಂದುಕೊಡುತಿದ್ದಳು. ಇಷ್ಟಲ್ಲ ಆಗಿ ಬೇಂಕಿನಲ್ಲಿ ಒಂದೆರಡು ಸಾವಿರ ರೂಪಾಯಿ ಠೇವಣಾತಿ ಇರಬಹುದಿತ್ತು!

ಮೊನ್ನಿನ ಯುದ್ಧದಲ್ಲಿ ಅಮೇರಿಕಾ ಒಂದು ರಾಷ್ಟ್ರದ ಬರೀ ನಗದಿ ಖರ್ಚು ನಾಲ್ಕು ಸಾವಿರ ಬಿಲಿಯ ಡಾಲರ್. ಇದಿಷ್ಟನ್ನೇ ಹಂಚಿದ್ದರೂ ಜಗತ್ತಿನ ಪ್ರತಿಯೊಂದು ವ್ಯಕ್ತಿಗೂ ರೂ. 4500 ಸಿಗುತಿತ್ತು. ಇದರ ಮೇಲೆ ಇಂಗ್ಲೇಂಡ್, ಫ್ರಾನ್ಸು, ಜರ್ಮನಿ ಮೊದಲಾದ ಇತರ ರಾಷ್ಟ್ರಗಳ ಖರ್ಚಿದೆ. ಜತೆಗೆ ಎಲ್ಲಾ ರಾಷ್ಟ್ರಗಳೂ ವರ್ಷ ವರ್ಷವೂ ಯುದ್ಧದ ತಯಾರಿಗಾಗಿ ಖರ್ಚುಮಾಡುವ ಸಾವಿರಾರು ಕೋಟಿ ರೂಪಾಯಿಗಳು ಬೇರೆ ಇವೆ. ಇವಿಷ್ಟನ್ನೂ ಜನರ ಜೀವನ ಸೌಕರ್ಯಗಳನ್ನೊದಗಿಸಲು ಉಪಯೋಗಿಸುವಂತಾಗಿದ್ದರೆ ನಾವೆಲ್ಲರೂ ಸ್ವಂತ ಕಾರಿನಲ್ಲಿಯೇ ತಿರುಗಬಹುದಿದ್ದಿತು; ಮನೆ ಮನೆಯಲ್ಲಿಯೂ ರೇಡಿಯೋ ಇರುತಿದ್ದಿತು.

ಇಂತಹ ಹಾನಿಕಾರಕ ಯುದ್ಧವನ್ನು ಆಗದಂತೆ ಮಾಡಲು ಸಾಧ್ಯವಿಲ್ಲವೇ? ಖಂಡಿತವಾಗಿಯೂ ಸಾಧ್ಯ. ಮೊತ್ತಮೊದಲು ಎಲ್ಲಾ ರಾಷ್ಟ್ರಗಳೂ ಯಾವ ಸಂದರ್ಭದಲ್ಲಿಯೂ ಯುದ್ಧ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು.

ತಮ್ಮೊಳಗಿನ ವಿವಾದಗಳನ್ನು ಶಾಂತ ರೀತಿಯಿಂದಲೇ ಬಗೆಹರಿಸಿಕೊಳ್ಳುವು ದಾಗಿ ನಿಶ್ಚಯಮಾಡಬೇಕು. ಎಲ್ಲಾದರೂ ಆಕ್ರಮಣ ನಡೆದರೆ ಅದನ್ನು ಎಲ್ಲಾ ರಾಷ್ಟ್ರಗಳೂ ಒಟ್ಟಾಗಿ ಎದುರಿಸಬೇಕು. ಅದಕ್ಕಾಗಿ ಸ್ಥಾಪಿತವಾಗಿ ರುವ ಸಂಯುಕ್ತ ರಾಷ್ಟ್ರಗಳ ಸಂಘವನ್ನು ಬಲಪಡಿಸಬೇಕು. ಆಟಂ ಬೊಂಬು ಮೊದಲಾದ ಭೀಕರ ಆಯುಧಗಳ ಉತ್ಪಾದನೆ ನಿಲ್ಲಬೇಕು. ರಾಷ್ಟ್ರ ಗಳೆಲ್ಲವೂ ಶಸ್ತ್ರಸನ್ಯಾಸ ಮಾಡಬೇಕು. ಹೀಗೆ ಮಾಡಿದರೆ ವಿಶ್ವಶಾಂತಿಯು ನೆಲೆಗೊಳ್ಳುವುದರಲ್ಲಿ ಸಂದೇಹವಿಲ್ಲ.

ಎರಡು ಧ್ರುವಗಳು.

“ಜಾನಾಮಿ ಧರ್ಮಂ ನಚಮೇ ಪ್ರವೃತ್ತಿಃ ।
ಜಾನಾಮ್ಯಧರ್ಮಂ ನಚಮೇ ನಿವೃತ್ತಿಃ” ॥

ಎಂದು ಹಿರಿಯರು ಹೇಳಿದ್ದಾರೆ. ಅಂದರೆ ಒಳ್ಳೆಯದಾವುದೆಂಬುದನ್ನು ಬಲ್ಲೆ; ಆದರೆ ಅದರಂತೆ ನಡೆಯಲಾರೆ. ಕೆಟ್ಟದಾವುದೆಂಬುದನ್ನೂ ಬಲ್ಲೆ; ಆದರೆ ಅದರಂತೆ ನಡೆಯದಿರಲಾರೆ. ಇಂದು ಜಗತ್ತಿನ ಮುತ್ಸದ್ದಿಗಳ ಕಥೆಯೂ ಹೀಗೆಯೇ ಆಗಿದೆ. ಅವರು ವಿಶ್ವಶಾಂತಿಯನ್ನು ಸ್ಥಾಪಿಸಲು ಏನೇನು ಮಾಡಬೇಕೆಂದು ಸಂಪೂರ್ಣ ಬಲ್ಲರು. ಆದರೆ ಮಾಡುವುದು ಪೂರ್ಣ ಅದಕ್ಕೆ ವಿರೋಧವಾದುದನ್ನೇ. ವಿಶ್ವಶಾಂತಿಗೆ ಶಸ್ತ್ರಸನ್ಯಾಸ ಅಗತ್ಯ; ಆದರೆ ಎಲ್ಲಾ ರಾಷ್ಟ್ರಗಳೂ ಭರದಿಂದ ಶಸ್ತ್ರೀಕರಣ ಮಾಡುತ್ತಿವೆ. ಸಂಯುಕ್ತ ರಾಷ್ಟ್ರಗಳ ಸಂಘವನ್ನು ಬಲಪಡಿಸಬೇಕು; ಬದಲಿಗೆ ಅದನ್ನು ತಮ್ಮ ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಳ್ಳಲೆತ್ನಿಸಿ ದುರ್ಬಲಗೊಳಿಸುತ್ತಿವೆ. ಆಕ್ರಮಣ ಕ್ರಿಯೆಯು ಎಲ್ಲಿಯೇ ನಡೆಯಲಿ, ಅದನ್ನು ಒಗ್ಗಟ್ಟಿನಿಂದ ಎದುರಿಸಬೇಕು; ಆದರೆ ತಮಗೆ ಅನುಕೂಲವಾಗುವಂತೆ ಆಕ್ರಮಣ ನಡೆದಲ್ಲಿ ಅದನ್ನು ಹತ್ತಿ ಕ್ಕಲು ಯತ್ನಿಸುವ ಬದಲು ಪ್ರೋತ್ಸಾಹಿಸುತ್ತವೆ. ತಮ್ಮೊಳಗಿನ ವಿವಾದ ಗಳನ್ನು ಶಾಂತ ರೀತಿಯಿಂದಲೇ ಬಗೆಹರಿಸಿಕೊಳ್ಳಬೇಕು; ಬದಲಾಗಿ ಯುದ್ಧ

ಮಾಡುತ್ತವೆ. ಹೀಗೆ ಸರ್ವ ವಿಧದಿಂದಲೂ ವಿಶ್ವಶಾಂತಿಯು ಭಂಗವಾಗು ವಂತೆಯೇ ವರ್ತಿಸುತ್ತವೆ.

"ಇದೇಕೆ ಹೀಗಾಗುತ್ತಿದೆ?" ಎಂದು ಯಾವನೊಬ್ಬ ಮುತ್ಸದ್ದಿಯನ್ನು ಕೇಳಿದರೂ ಉತ್ತರ ಒಂದೇ. "ನಮ್ಮದೇನೂ ತಪ್ಪಿಲ್ಲ. ಆ ರಾಷ್ಟ್ರವು ನಮ್ಮ ಮೇಲೆ ದಾಳಿಮಾಡಲು ಸಿದ್ಧತೆ ಮಾಡುತ್ತಿದೆ. ಅದನ್ನೆದುರಿಸಲು ನಾವೂ ಶಸ್ತ್ರೀಕರಣ ಮಾಡಬೇಕಾಗಿದೆ. ಈ ರಾಷ್ಟ್ರವು ನಮ್ಮ ವಿನಾಶಕ್ಕಾಗಿ ಪ್ರಯತ್ನಿಸುತ್ತಿದೆ. ಆದುದರಿಂದ ನಾವು ನಮ್ಮ ಆತ್ಮರಕ್ಷಣೆಗಾಗಿ ಮಿತ್ರ ಕೂಟವೊಂದನ್ನು ರಚಿಸಬೇಕಾಗಿದೆ." ಎಂದು ಅನ್ಯರಾಷ್ಟ್ರಗಳ ಮೇಲೆ ತಪ್ಪನ್ನು ಹೊರಿಸುತ್ತಾರೆ.

ಹೀಗೆ ರಾಷ್ಟ್ರಗಳೊಳಗೆ ಪರಸ್ಪರ ಸಂಶಯ, ಭೀತಿ, ಇವುಗಳು ಮನೆ ಮಾಡಿಕೊಂಡಿವೆ. ಹಾಗೆಯೇ ರಾಷ್ಟ್ರಗಳೊಳಗಿನ ಎಷ್ಟೋ ವಿವಾದಗಳೂ ಬಹಳ ಜಟಿಲವಾಗಿವೆ ಎನ್ನೋಣ. ಆದರೂ ರಾಷ್ಟ್ರಗಳೊಳಗಿರುವ ಪರಸ್ಪರ ನಿಕಟ ಸಂಬಂಧ, ಯುದ್ಧದಿಂದಾಗುವ ಹಾನಿ ಇವುಗಳನ್ನೆಲ್ಲಾ ಮನ ಗಾಣಿಸಿ ಶಾಂತ ರೀತಿಯಿಂದಲೇ ಅವುಗಳನ್ನು ನಿವಾರಿಸುವುದು ಅಸಾಧ್ಯವಲ್ಲ. ಆದರೆ ಇವುಗಳೆಲ್ಲಾ ಒಳಗಿರುವ ರೋಗದ ಕೇವಲ ಸೂಚನೆಗಳು ಮಾತ್ರ. ರೋಗವು ಬೇರೆಯೇ ಇದೆ. ಇವುಗಳೆಲ್ಲವುಗಳ ಹಿನ್ನೆಲೆಯಲ್ಲಿ ಇವುಗಳ ನ್ನೆಲ್ಲಾ ಆವರಿಸಿಕೊಂಡು ಒಂದು ಮಹಾಪ್ರಶ್ನೆ ನಿಂತಿದೆ. ಇಂದು ಪ್ರಪಂಚ ದಲ್ಲಿ ಎರಡು ತತ್ವಗಳು ಒಡೆತನಕ್ಕಾಗಿ ಹೋರಾಡುತ್ತಿವೆ. ಒಂದನ್ನು ಸಾಮ್ಯ ವಾದ (ಕಮ್ಯೂನಿಸಂ) ಎನ್ನುವರು. ಇದನ್ನು ರಷ್ಯಾ ಮತ್ತು ಅದರ ಪಕ್ಷದ ರಾಷ್ಟ್ರಗಳು ಅಂಗೀಕರಿಸಿವೆ. ಇನ್ನೊಂದನ್ನು ಬಂಡವಲವಾದವೆನ್ನುತ್ತಾರೆ. ಇದು ಅಮೇರಿಕಾ ಮತ್ತು ಇತರ ರಾಷ್ಟ್ರಗಳಲ್ಲಿ ಪ್ರಚಾರದಲ್ಲಿದೆ. ಈ ತತ್ವ ಗಳು ಒಂದನ್ನೊಂದು ಸಂಪೂರ್ಣ ಅಲ್ಲಗಳೆಯುತ್ತವೆ.

ಸಾಮ್ಯವಾದದ ಪ್ರಕಾರ ಖಾಸಗಿ ಸೊತ್ತುಗಳನ್ನು ಇಟ್ಟುಕೊಳ್ಳುವು ದೆಂದರೆ ಕಳ್ಳತನವೇ ಸರಿ. ಪ್ರಕೃತಿಯೇ ವಸ್ತುಗಳ ಮೂಲ. ಪ್ರಕೃತಿಯು ಎಲ್ಲರಿಗೂ ಸೇರಿದ್ದು. ಆದುದರಿಂದ ವಸ್ತುಗಳ ಉತ್ಪಾದನೆಯ ಮೂಲ

ಮತ್ತು ಉಪಕರಣಗಳು ವ್ಯಕ್ತಿಗಳ ಕೈಯಲ್ಲಿರಬಾರದು; ಸಮಾಜದ ಒಡೆತನ ದಲ್ಲಿರಬೇಕು— ಎಂದು ಸಾಮ್ಯವಾದಿಗಳು ಹೇಳುತ್ತಾರೆ.

ಆದರೆ ಧಂಡವಲವಾದದ ವೃಷ್ಟಿಯಲ್ಲಿ ಖಾಸಗಿ ಒಡೆತನವೆಂಬುದೇ ವ್ಯಕ್ತಿ ಜೀವನದ ಲಕ್ಷಣ. ಒಬ್ಬನು ತಾನು ಇತರಿಂದ ಬೇರೆಯಾಗಿರುವ ವ್ಯಕ್ತಿ ಎಂಬುದನ್ನು ಪ್ರಕಟ ಪಡಿಸುವುದೇ ಅವನ ಖಾಸಗಿ ಒಡೆತನದಿಂದ. ಖಾಸಗಿ ಒಡೆತನವಿಲ್ಲದೆ "ನಾನು" ಎಂಬ ಪದದ ನಿರ್ವಚನೆಯೇ ಅಸಾಧ್ಯ. ಯಾವ್ಯಾವ ವಸ್ತುಗಳು ನಾನು, ಯಾವ್ಯಾವ ವಸ್ತುಗಳು ನಾನಲ್ಲ, ಹಾಗೆಯೇ ಯಾವ್ಯಾವ ವಸ್ತುಗಳು ನನ್ನವು, ಯಾವ್ಯಾವ ವಸ್ತುಗಳು ನನ್ನವಲ್ಲ ಎಂಬುದರಿಂದಲೇ "ನಾನು" ಎಂಬ ಪದದ ವ್ಯಾಪ್ತಿಯು ನಿರ್ಣಯವಾಗುತ್ತದೆ— ಎನ್ನುತ್ತಾರೆ ಧಂಡವಲವಾದಿಗಳು.

ಹೀಗೆ ಈ ಎರಡು ತತ್ವಗಳು ಒಂದಕ್ಕೊಂದು ಸಂಪೂರ್ಣ ವಿರುದ್ಧ ವಾಗಿವೆ. ಒಂದರ ಅಸ್ತಿತ್ವವೇ ಇನ್ನೊಂದರ ನಾಸ್ತಿತ್ವ. ಅದರಿಂದಾಗಿ ಮಧ್ಯ ಯುಗದಲ್ಲಿ ಧಾರ್ಮಿಕ ವಿಷಯಗಳಲ್ಲಿಯೂ ಕಾಣದ ಅಸಹಿಷ್ಣುತೆಯನ್ನು ಇಂದು ನಾವು ರಾಜಕೀಯ ವಿಷಯಗಳಲ್ಲಿ ಕಾಣುತಿದ್ದೇವೆ. ಒಂದು ತತ್ವ ವನ್ನು ಪ್ರತಿಪಾದಿಸುವ ರಾಷ್ಟ್ರಗಳ ಬಣಕ್ಕೆ ಇನ್ನೊಂದು ತತ್ವವನ್ನು ಪ್ರತಿಪಾದಿ ಸುವ ರಾಷ್ಟ್ರಗಳ ಬಣದ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ. ಒಂದನ್ನೊಂದು ಕೇವಲ ಸಂಶಯದಿಂದ ಕಾಣುತ್ತಿವೆ. ಇದರಿಂದ ಒಂದು ಬಣಕ್ಕೆ ಇನ್ನೊಂದರ ಭೀತಿ ಹೆಚ್ಚಾಗುತ್ತಾ ಇದೆ. ಅವು ತಮ್ಮ ತಮ್ಮ ಬಲ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ತಮ್ಮ ತಮ್ಮ ಕಡೆಗೆ ಆದಷ್ಟು ರಾಷ್ಟ್ರಗಳನ್ನು ಸೇರಿಸಿ ಕೊಳ್ಳಲು ಯತ್ನಿಸುತ್ತಿವೆ. ಹೀಗೆ ಪರಸ್ಪರ ಭೀತಿಯಿಂದಾಗಿ ಒಂದು ಇನ್ನೊಂ ದರ ನಾಶವನ್ನು ಹಾರೈಸುತ್ತಿದೆ. ಅಂತೆಯೇ ಎರಡೂ ಪಕ್ಷಗಳೊಳಗೆ ರಾಜಿ ಯಾಗುತ್ತಿಲ್ಲ; ವಿಶ್ವಶಾಂತಿಯು ಸಾಧ್ಯವಾಗುತ್ತಿಲ್ಲ.

ಆದರೆ ಬಿಚ್ಚು ಮನಸ್ಸಿನಿಂದ ಎರಡೂ ಪಕ್ಷದವರೂ ಪ್ರಯತ್ನಿಸಿದರೆ ರಾಜಿಯಾಗುವುದು ಅಸಾಧ್ಯವಲ್ಲ. ಏಕೆಂದರೆ ಎರಡೂ ಪಕ್ಷಗಳಿಗೂ ಗುರಿ ಒಂದೇ— ಮಾನವ ಹಿತಸಾಧನೆ. ಆದರೆ ಈ ಗುರಿಯನ್ನು ಸಾಧಿಸುವ

ಕ್ರಮದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿವೆ. ಸಾಮ್ಯವಾದವು ಕ್ರಾಂತಿಯ ಮಾರ್ಗವನ್ನು ಹಿಡಿದಿದ್ದರೆ ಭಂಡವಲವಾದವು ಸುಧಾರಣೆಯ ಮಾರ್ಗವನ್ನು ನೆಚ್ಚಿಕೊಂಡಿದೆ. ಸಾಮ್ಯವಾದವು ಸಮಾಜದ ಹಿತಕ್ಕೆ ತಕ್ಕಂತೆ ವ್ಯಕ್ತಿಜೀವನವಿರಬೇಕು ಎನ್ನುತ್ತದೆ. ಭಂಡವಲವಾದವು ವ್ಯಕ್ತಿಯ ಹಿತಕ್ಕೆ ತಕ್ಕಂತಹ ಸಮಾಜವಿರಬೇಕು ಎನ್ನುತ್ತದೆ. ಆದರೂ ಉದ್ದೇಶದಲ್ಲಿ ಒಮ್ಮತವಿದ್ದ ಮೇಲೆ ಕ್ರಮದಲ್ಲಿ ಒಮ್ಮತ ಉಂಟಾಗುವುದೇನೂ ಕಷ್ಟವಲ್ಲ. ಒಂದು ವೇಳೆ ಒಮ್ಮತವು ಸಾಧ್ಯವಾಗದಿದ್ದರೂ ಅವರವರ ಕ್ರಮವನ್ನು ಒಬ್ಬರು ಇನ್ನೊಬ್ಬರಿಗೆ ತೊಂದರೆಯಾಗದಂತೆ ಅನುಸರಿಸಬಹುದು. ಆದುದರಿಂದ ಎರಡೂ ಕಡೆಯವರೂ ಒಟ್ಟು ಸೇರಿ ಒಮ್ಮತದ ಮಾರ್ಗದಿಂದಲೋ ಅಥವಾ ಅವರವರ ಮಾರ್ಗದಲ್ಲಿ ಪರಸ್ಪರ ಸಹಕಾರದಿಂದಲೋ ತಮ್ಮ ಉದ್ದೇಶವಾದ ಮಾನವ ಹಿತವನ್ನು ಸಾಧಿಸಬಹುದಾಗಿದೆ. ಆಗ ಎರಡೂ ಬಣಗಳೊಳಗೂ ರಾಜಿಯಾಗಿ ವಿಶ್ವಶಾಂತಿಯು ನೆಲೆಗೊಳ್ಳಲು ಸಾಧ್ಯವಾಗುವುದು.

ಇದಾಗಬೇಕಾದರೆ ಮೊದಲು ಎರಡೂ ಕಡೆಯವರಲ್ಲಿಯೂ ತುಂಬಾ ಮಾನಸಿಕ ಪರಿವರ್ತನೆಯಾಗಬೇಕಾಗಿದೆ. ಈಗ ಪ್ರತಿಯೊಂದು ಪಕ್ಷದ ಅಭಿಪ್ರಾಯದಲ್ಲಿಯೂ ತನ್ನದು ಪೂರ್ಣಸತ್ಯ, ಇನ್ನೊಂದರದು ಪೂರ್ಣಸುಳ್ಳು ಎಂದಿದೆ. ಈ ಬಗೆಯ ಅಸಹನೆಯ ಮನೋವೃತ್ತಿಯು ಸರಿಯಲ್ಲ. ಪ್ರಕೃತಿಯಲ್ಲಿ ಪೂರ್ಣ ಒಳ್ಳೆಯದು ಅಥವಾ ಪೂರ್ಣ ಕೆಟ್ಟದು ಯಾವುದೂ ಇಲ್ಲ. ಯಾವುದನ್ನು ನಾವು ಕೆಟ್ಟದೆನ್ನುವೆವೋ ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಲು ಬರುತ್ತದೆ. ಹಾಗೆಯೇ ಒಳ್ಳೆಯದೆನಿಸಿಕೊಂಡುದನ್ನೂ ದುರುಪಯೋಗ ಪಡಿಸಿದರೆ ಕೆಟ್ಟ ಫಲವನ್ನೇ ಕೊಡುತ್ತದೆ. ಅದಲ್ಲದೆ ಒಂದು ವಸ್ತುವು ಎಷ್ಟು ಒಳ್ಳೆಯದಿದ್ದರೂ ಅದು ಪರಿಪೂರ್ಣತೆಯನ್ನು ಹೊಂದಿರುವುದಿಲ್ಲ. ಅಪೂರ್ಣತೆಯೇ ಜೀವತ್ವದ ಲಕ್ಷಣ. ಪೂರ್ಣತೆಯ ಕಡೆಗೆ ಮುನ್ನಡೆಯುವುದೇ ಜೀವನ. ಆದುದರಿಂದ ಸತ್ಯದ ಪೂರ್ಣ ಗುತ್ತಿಗೆ ನಮಗೇ ಇದೆ, ನಮ್ಮದು ಶುದ್ಧ ಒಳ್ಳೆಯ ಕ್ರಮ, ಇನ್ನೊಬ್ಬನದರಲ್ಲಿ ಏನೇನೂ ಒಳ್ಳೆಯದಿಲ್ಲ ಎಂಬುದನ್ನು ಬಿಡಬೇಕು. ನಮ್ಮದರಲ್ಲಿಯೂ ದೋಷಗಳಿರಬಹುದು; ಇನ್ನೊಬ್ಬನದರಲ್ಲಿಯೂ ಒಳ್ಳೆಯದಿರಬಹುದು. ಮಾನವ

ಹಿತವೇ ನಮ್ಮ ಗುರಿ ಎಂದಾದ ಮೇಲೆ ನಮ್ಮ ಕ್ರಮವೇ ಗೆಲ್ಲಬೇಕೆಂಬ ಛಲ ದಲ್ಲಿ ಅರ್ಥವಿಲ್ಲ. ಸನ್ನಿವೇಶವು ಒಳ್ಳೆಯದೆಂದು ಕಂಡುದನ್ನು ಆರಿಸಿ ಕೊಳ್ಳಲಿ; ಏಕೆಂದರೆ ಕೊನೆಗೂ ಆ ಇನ್ನೊಬ್ಬನ ಕ್ರಮದಲ್ಲಿಯೇ ಮನುಷ್ಯ ಕುಲವನ್ನು ಉದ್ಧರಿಸುವ ಸತ್ಯಗಳಿರಬಹುದು— ಯಾರಿಗೆ ಗೊತ್ತು? ಎಷ್ಟೋ ಸಲ ಒಂದು ಹೊಸ ಸುಧಾರಣೆಯ ಪೂರ್ಣ ಪರಿಣಾಮ ಆ ಕೂಡಲೇ ತಿಳಿಯುವುದಿಲ್ಲ. ಇಂಗ್ಲೆಂಡಿನ ರಾಜಕೀಯ ಪ್ರಗತಿಯಲ್ಲಿ ಪಕ್ಷಗಳ ಕ್ರಮ, ಮಂತ್ರಿ ಮಂಡಲ, ಮುಖ್ಯ ಮಂತ್ರಿ ಪದವಿ— ಇವುಗಳು ರೂಪಿತವಾಗುತಿದ್ದ ಕಾಲದಲ್ಲಿ ಯಾರೊಬ್ಬರೂ ಅವುಗಳನ್ನು ಮೆಚ್ಚಿದವರಿಲ್ಲ; ಎಲ್ಲರೂ ಪ್ರತಿಯೊಂದನ್ನೂ ಸಂಕುಚಿತ ಭಾವನೆ, ವಶೀಲಿ ವೃತ್ತಿ, ಸ್ವಾರ್ಥೀ ಕ್ರಮ ಎಂದು ಖಂಡಿಸಿದವರೇ. ಈಗ ಅವುಗಳಿಲ್ಲದೆ ಪ್ರಜಾಧಿಕಾರವೇ ಇರಲಾರದು ಎಂದು ಎಲ್ಲರೂ ಹೇಳುತ್ತಾರೆ. ಆದುದರಿಂದ ವಿರೋಧಾಭಿ ಪ್ರಾಯಗಳು ಪರಸ್ಪರ ಸಹನೆಯಿಂದಿರುವುದು ಮಾನವಪ್ರಗತಿಗೆ ಅತ್ಯಗತ್ಯ.

ಸಾಮ್ಯವಾದದ ಅಂಬೋಣದಂತೆ ಜಗತ್ತಿನಲ್ಲಿ "ಇದ್ದವರು" ಮತ್ತು "ಇಲ್ಲದವರು" ಎಂಬ ಎರಡೇ ವರ್ಗಗಳಿವೆ. ಈ ವರ್ಗಗಳೊಳಗೆ ಸದಾ ಹೋರಾಟ ನಡೆಯುತ್ತಿದೆ. ಈ ಹೋರಾಟವು ಕ್ರಾಂತಿಯಲ್ಲಿ ಪರ್ಯವಸಾನ ಗೊಂಡು, "ಇಲ್ಲದವರ" ಅಧಿಕಾರವು ಸ್ಥಾಪಿತವಾಗುತ್ತದೆ ಎಂದು ಸಿದ್ಧಾಂತ. ಆದರೆ ಈಗ ಸಮಾಜದಲ್ಲಿ ಈ ಎರಡೇ ವರ್ಗಗಳಿಲ್ಲ. ಇವುಗಳ ನಡುವೆ ಮಧ್ಯಮ ವರ್ಗವೊಂದು ಪ್ರಬಲವಾಗಿದೆ. ಭಂಡವಲವು "ಇದ್ದವರು" ಎಂಬ ಕೆಲವೇ ಭಂಡವಾಳಿಗರ ಕೈಯಲ್ಲಿ ಕೇಂದ್ರೀಕೃತವಾಗುವ ಬದಲು ಈ ಮಧ್ಯಮ ವರ್ಗದವರ ಕೈಯಲ್ಲಿ ಹಂಚಿಹೋಗುತ್ತಾ ಇದೆ. ಮಾತ್ರವಲ್ಲ ಇಂದಿನ ಭಂಡ ವಲವೂ ಕೂಡಾ ಹಿಂದಿನ ಕಾಲದ ಭಂಡವಲದಂತಿಲ್ಲ. ಹಿಂದಿನ ಕಾಲದ ಭಂಡವಲವು ಕೇವಲ ಲಾಭದ ದೃಷ್ಟಿಯನ್ನಿಟ್ಟುಕೊಂಡು ಮಜೂರರ ಹಿತ ವನ್ನು ಕಡೆಗಣಿಸುತಿತ್ತು; ವಸಾಹತು ಸಾಮ್ರಾಜ್ಯ ಪದ್ಧತಿಯಿಂದ ಅನ್ಯದೇಶ ಗಳ ಸಂಪತ್ತನ್ನು ಸೂರೆಗೊಳ್ಳುತಿತ್ತು. ಇಂದಿನ ಭಂಡವಲವಾದರೋ ಮಜೂರರ ಹಿತವನ್ನು ತಕ್ಕಮಟ್ಟಿಗೆ ಸಾಧಿಸಲು ಯತ್ನಿಸುತ್ತಿದೆ. ಹಾಗೆಯೇ ಅನ್ಯದೇಶಗಳ ಸಂಪತ್ತನ್ನು ಸೂರೆಗೊಳ್ಳುವ ಬದಲು ಅವುಗಳನ್ನು ಅಭಿವೃದ್ಧಿ

ಗೊಳಿಸಲು ಸಹಾಯ ಮಾಡುತ್ತಿದೆ. ಹೀಗಾಗಿ ಭಂಡವಲದ ಪ್ರಭಾವ ವಿಶೇಷವಾಗಿರುವ, ಕೈಗಾರಿಕೆಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಕ್ರಾಂತಿಗಳಾಗುತ್ತಿಲ್ಲ. ಕೈಗಾರಿಕೆಯಲ್ಲಿ ಹಿಂದುಳಿದ ರಷ್ಯಾ, ಚೀನಾಗಳಲ್ಲಿಯೇ ಕ್ರಾಂತಿಯಾಗಿದೆ. ಆದುದರಿಂದ ಕ್ರಾಂತಿಯು ಅನಿವಾರ್ಯವಲ್ಲ; ಹಾಗೂ ಅಗತ್ಯವೂ ಅಲ್ಲ.

ಆರ್ಥಿಕ ವಿಕಾಸದ ಸರಪಣಿಯಲ್ಲಿ ಸಾಮ್ಯವಾದವೆಂಬುದು ಒಂದು ಗೊಣಸು. ಅದು ಎಷ್ಟೇ ಕ್ರಾಂತಿಕಾರಕ ಬದಲಾವಣೆಯಾದರೂ ಹಳೆಯದರಿಂದಲೇ ಉದ್ಭವಿಸಿದುದು; ತನ್ನಿಂದ ತಾನೇ ಉಂಟಾದುದಲ್ಲ. ಅಂತೆಯೇ ಸಾಮ್ಯವಾದವೂ ಕಾಲಕ್ರಮೇಣ ಬದಲಾವಣೆಗೊಳ್ಳಬೇಕಾಗುವುದು. ಈಗಾಗಲೇ ಸಾಮ್ಯವಾದೀ ರಾಷ್ಟ್ರಗಳಲ್ಲಿ ಖಾಸಗಿ ಲಾಭಕ್ಕೆಡೆಯಿಲ್ಲದುದರಿಂದ ಉತ್ಪಾದನೆಯು ಭಂಡವಲವಾದೀ ರಾಷ್ಟ್ರಗಳಿಗಿಂತ ಹಿಂದೆ ಬೀಳುತ್ತಿದೆ ಎಂದು ಕೇಳುತ್ತಿದ್ದೇವೆ. ಆದುದರಿಂದ ಸಾಮ್ಯವಾದವು ತಾನೇ ಚಿರ ಶಾಶ್ವತ, ಸನಾತನ ಸತ್ಯ ಎಂಬ ಧೋರಣೆಯನ್ನು ಬಿಟ್ಟು ಬದಲಾವಣೆಗೆ ಎಡೆಕೊಡಬೇಕು.

ಭಂಡವಲವಾದೀ ರಾಷ್ಟ್ರಗಳಾದರೂ ಕೂಡ ಸಾಮ್ಯವಾದೀ ರಾಷ್ಟ್ರಗಳಿಗೆ ಪ್ರಪಂಚದಲ್ಲಿ ಒಂದು ಸ್ಥಾನವಿದೆ ಎಂಬುದನ್ನು ಅರಿತುಕೊಳ್ಳಬೇಕು. ರಷ್ಯವಂತೂ ಈಗಾಗಲೇ ಒಂದು ಯುದ್ಧವನ್ನು ಯಶಸ್ವಿಯಾಗಿ ಕಾದಿ ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಿಕೊಂಡಿದೆ. ಅದು ತನ್ನ ಆರ್ಥಿಕ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿಕೊಂಡಿದೆ. ಅದಲ್ಲದೆ ಈ ರಾಷ್ಟ್ರಗಳು ತಮಗೆ ಒಳ್ಳೆಯದೆಂದು ಕಾಣುವ ವ್ಯವಸ್ಥೆಯನ್ನು ಇನ್ನೊಂದು ದೇಶದ ಜನರ ಮೇಲೆ ಹೇರುವುದಕ್ಕೆ ತಮಗೆ ಹಕ್ಕಿಲ್ಲ ಎಂಬುದನ್ನೂ ಗಮನಿಸಬೇಕು. ಮಾತ್ರವಲ್ಲ ಸಾಮ್ಯವಾದವನ್ನು ವಿರೋಧಿಸುವ ಬದಲು ಸಾಮ್ಯವಾದಕ್ಕೆ ಆಸ್ಪದ ಕೊಡುವ ಆರ್ಥಿಕ ಅವ್ಯವಸ್ಥೆಯನ್ನುನಿವಾರಿಸಬೇಕು.

ಹೀಗೆ ಈ ಎರಡೂ ಬಣಗಳೊಳಗೆ ಪರಸ್ಪರ ಸಹಿಷ್ಣುತೆಯಿದ್ದು ಸಾಮ್ಯವಾದೀ ರಾಷ್ಟ್ರಗಳು- ಅಂದರೆ ಮುಖ್ಯವಾಗಿ ರಷ್ಯವು- ತನ್ನ ಪ್ರಜೆಗಳಿಗೆ ಸ್ವಲ್ಪ ವಿಚಾರಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ ಕೊಟ್ಟು ವಿರೋಧ ಪಕ್ಷಗಳಿಗೆ

ನಡೆಕೊಟ್ಟರೆ, ಹಾಗೆಯೇ ಬಂಡವಲವಾದೀ ರಾಷ್ಟ್ರಗಳು— ಅವುಗಳಲ್ಲಿ ಮುಖ್ಯವಾಗಿ ಅಮೇರಿಕವು— ವೈಯಕ್ತಿಕ ಸಾಹಸಕ್ಕೆ ಮಿತಿಯನ್ನು ವಿಧಿಸಿ, ಶ್ರೀಮಂತರ ಶ್ರೀಮಂತಿಕೆಯ ಮೇಲೆ ಬಡವರ ಬಡತನದ ಜವಾಬ್ದಾರಿಯೂ ಇದೆ ಎಂಬ ಅರಿವುಂಟಾಗುವಂತೆ ಮಾಡಿದರೆ, ಈ ಎರಡೂ ಬಣಗಳೊಳಗೆ ಸಮಜೀವನವು ಸಾಧ್ಯವಾಗಬಹುದು; ವಿಶ್ವಶಾಂತಿಯು ನೆಲೆಗೊಳ್ಳಬಹುದು.

ಭಾರತದ ಭಾರ.

“ಭಾರತವನ್ನಾಳುವವನು ಜಗತ್ತನ್ನೇ ಆಳುವನು” — ಇದೊಂದು ನಾಣ್ಣುಡಿಯು ಯುರೋಪಿನಲ್ಲಿ ಪ್ರಚಲಿತವಿದೆ. ಅಂದು ಮಧ್ಯಯುಗದಲ್ಲಿ ಯುರೋಪಿಯನ್ನರನ್ನು ಭಾರತಕ್ಕೆ ಮಾರ್ಗಾನ್ವೇಷಣ ಮಾಡುವಂತೆ ಹುರಿದುಂಬಿಸಿದುದು ಈ ನಾಣ್ಣುಡಿಯೇ. ಈ ನಾಣ್ಣುಡಿಯೇ ನೆಪೋಲಿಯನ್ನನನ್ನು ಇಜಿಪ್ಟಿನ ವರೆಗೆ ಎಳೆದು ತಂದಿತು. ಹಾಗೆಯೇ ಹತ್ತೊಂಬತ್ತನೇ ಶತಮಾನದಲ್ಲಿ ರಷ್ಯವು ಭಾರತದ ಕಡೆಗೆ ಮುನ್ನುಗ್ಗುತ್ತಿದ್ದುದಾದರೂ ಈ ನಾಣ್ಣುಡಿಯ ಪ್ರಭಾವದಿಂದಲೇ. ಅದಲ್ಲದೆ ಭಾರತವನ್ನಾಳುತ್ತಿದ್ದಲ್ಲಿಯ ವರೆಗೆ ಜಗತ್ತಿನಲ್ಲಿಯೇ ಪ್ರಬಲರಾಷ್ಟ್ರವೆನ್ನಿಸಿಕೊಂಡಿದ್ದ ಬ್ರಿಟನ್ನು ಭಾರತವನ್ನು ಬಿಟ್ಟೊಡನೆಯೇ ತೃತೀಯ ದರ್ಜೆಯ ರಾಷ್ಟ್ರಗಳ ಮಟ್ಟಕ್ಕಿಳಿಯುವುದನ್ನು ನೋಡಿದರೆ ಈ ನಾಣ್ಣುಡಿಯಲ್ಲಿ ಹುರುಳಿಲ್ಲವೆನ್ನಲಾಗುವುದಿಲ್ಲ.

ನಿಜವಾಗಿಯೂ ಭಾರತವು ಪ್ರಪಂಚದಲ್ಲಿ ಒಂದು ಪ್ರಾಮುಖ್ಯವಾದ ರಾಷ್ಟ್ರ. ಅದು ಜಗತ್ತಿನ ಒಂದು ಆಯಕಟ್ಟಿನ ಸ್ಥಳದಲ್ಲಿದೆ. ಪ್ರಬಲವಾದ ದೂರ ಪ್ರಾಚ್ಯದ ರಾಷ್ಟ್ರಗಳಿಗೂ ಯುರೋಪಿಯನ್ ರಾಷ್ಟ್ರಗಳಿಗೂ ಮಧ್ಯದಾರಿಯಲ್ಲಿ ಅದರ ಸ್ಥಾನವಿದೆ. ತುಂಬಾ ವಿಶಾಲವಾದ ದೇಶವಾದುದರಿಂದ ಅದರಲ್ಲಿ ಹಲವು ತರದ ವಾಯುಗುಣ, ಸಸ್ಯವಲಯಗಳು ಇವೆ. ಈ ಬಗೆಯ ವಿವಿಧತೆಯು ಅದರ ಯೋಗ್ಯತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಈ ವಿವಿಧತೆಯ ದೆಸೆಯಿಂದಾಗಿ ಅದು ಇಡೀ ಜಗತ್ತಿನ ಒಂದು ಪ್ರತೀಕದಂತಿದೆ. ಅದರ ಪ್ರಾಕೃತಿಕ ಸಂಪತ್ತು ವಿಪುಲವಾಗಿದೆ. ಮೇಲಾಗಿ ಅದು ಜನಭರಿತವಾದ ರಾಷ್ಟ್ರ. ಜಗತ್ತಿನ ಯಾವುದೇ ರಾಷ್ಟ್ರವಾದರೂ ಭಾರತದ ಮೂವತ್ತಾರು ಕೋಟಿ ಜನರ ಹಿತಾಹಿತಗಳನ್ನೂ, ಆಸೆನಿರಾಸೆಗಳನ್ನೂ ಕಡೆಗಣಿಸಲಾರದು. ಜಗತ್ತಿನಲ್ಲಿಯ ಪ್ರತಿ ಆರು ಜನರಲ್ಲಿ ಒಬ್ಬನು ಭಾರತೀಯನಿರುವನು; ಅಂದ ಮೇಲೆ ಭಾರತೀಯರ ಒಲುಮೆ ನಿಲುಮೆ ಜಗತ್ತಿನ ಯಾವೊಂದು ಸಮಸ್ಯೆಯ ಮೇಲೂ ತನ್ನ ಪ್ರಭಾವವನ್ನು ಬೀರದಿರಲಾರದು. ಅಲ್ಲದೆ ಭಾರತದ ನಿಲುಮೆಯ ಹಿಂದೆ ಗಾಂಧೀಜಿಯ ದಿವ್ಯಜೀವನದ ವರ್ಚಸ್ಸಿದೆ. ಅವರ ಆದರ್ಶಗಳಾದ ಸತ್ಯ, ಅಹಿಂಸೆಗಳ ಒತ್ತಡವಿದೆ.

ಹೀಗೆ ಭಾರತದ ಭೌಗೋಲಿಕ ಸ್ಥಾನ, ಪ್ರಾಕೃತಿಕ ಸಂಪತ್ತು, ಜನಸಂಖ್ಯೆ, ನೈತಿಕ ಹಿರಿಮೆ — ಇವುಗಳು ಅದನ್ನು ಜಗತ್ತಿನಲ್ಲಿ ಒಂದು ಪ್ರಾಮುಖ್ಯ ಪಾತ್ರಕ್ಕಾಗಿಯೇ ನಿರ್ಮಿಸಿವೆ ಎಂದು ಹೇಳಬಹುದು. ಇಂದಿನ ಜಗತ್ತಿನಲ್ಲಿರುವ ಸಾಮ್ಯವಾದೀ ಹಾಗೂ ಭಂಡವಲವಾದೀ ರಾಷ್ಟ್ರಗಳ ಇಬ್ಬಣಗಳಲ್ಲಿ ಭಾರತವು ಯಾವ ಕಡೆಗೆ ಒಲಿಯುವುದೋ ಆಕಡೆ ಅತೀವ ಬಲಶಾಲಿಯಾಗಿ ಬಿಡುವುದು. ಆದುದರಿಂದ ಭಾರತವು ತನ್ನ ನಿಲುಮೆಯಿಂದ ಜಗತ್ತಿನ ಭವಿತವ್ಯವನ್ನೇ ಇಂದು ನಿರ್ಣಯಿಸಬಲ್ಲುದೆಂದು ಹೇಳಬಹುದಾಗಿದೆ.

ಇಷ್ಟೊಂದು ಪ್ರಬಲ ಹಾಗೂ ವರ್ಚಸ್ವೀ ರಾಷ್ಟ್ರವಾದರೂ ಕೂಡ ಇದರಲ್ಲಿ ಹಲವು ದೌರ್ಬಲ್ಯಗಳಿವೆ. ಜನಸಂಖ್ಯೆಯಲ್ಲಿ ಪ್ರತಿ ನೂರರಲ್ಲಿ ಎಂಭತ್ತೈದು ಜನರು ಅನಕ್ಷರಸ್ಥರು. ಈ ಜನರು ರಾಷ್ಟ್ರಜೀವನದಲ್ಲಿ ತಮ್ಮ ಪಾಲಿನ ಕರ್ತವ್ಯಗಳನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಲಾರದವರಾಗಿದ್ದಾರೆ. ತಮ್ಮ ಮೂಢಭಕ್ತಿ, ಅಜ್ಞಾನಗಳ ದೆಸೆಯಿಂದ ಬಹು ಸುಲಭದಲ್ಲಿ ದುರ್ಬೋಧನೆಗೊಳಗಾಗಿ ವಂಚಿತರಾಗುತ್ತಾರೆ. ಆರ್ಥಿಕ ಪರಿಸ್ಥಿತಿಯಂತೂ ತೀರಾ ಅತೃಪ್ತಿಕರವಾಗಿದೆ. ಬಡವ, ಶ್ರೀಮಂತರೊಳಗಿನ ಅಂತರವು ವಿಶೇಷವಾಗಿದೆ; ಮತ್ತೂ ಹೆಚ್ಚುತ್ತಾ ಇದೆ. ಆಹಾರದ ಕೊರತೆಯು ರಾಷ್ಟ್ರದ ತಲೆ ತಿನ್ನುತ್ತಿದೆ. ಕೈಗಾರಿಕೆಯು ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಜನತೆಯಲ್ಲಿ ಜಾತೀಯತೆ, ಪ್ರಾಂತೀಯತೆ

ಮೊದಲಾದ ಸಂಕುಚಿತ ಭಾವನೆಗಳು ಬೇರೂರಿ ನಿಂತಿವೆ. ರಾಜಕೀಯ ದಲ್ಲಾಗಲೀ, ಆಡಳಿತೆಯಲ್ಲಾಗಲೀ ಸ್ವಾರ್ಥ, ಲಂಚಗುಳಿತನ ತಾಂಡವನಾಡು ತ್ತಿವೆ. ಕಳೆದ ಏಳುನೂರು ವರ್ಷಗಳಿಂದ ತಮ್ಮ ಸಹಾನುಭೂತಿಯಿಲ್ಲದ ಕೆಲವೊಂದು ಪಂಗಡಗಳಿಂದ ಆಳಲ್ಪಟ್ಟ ಜನರು ಈಗ ತಮ್ಮದೇ ಸರಕಾರ ಬಂದಿದ್ದರೂ ಅದರೊಡನೆ ಸಹಕರಿಸುವುದಿಲ್ಲ. ಸರಕಾರವೆಂದರೆ ತಮ್ಮ ಮೇಲೆ ಒತ್ತಾಯದಿಂದ ಹೇರಲ್ಪಟ್ಟ ಒಂದು ಸಂಸ್ಥೆ ಎಂಬ ಭಾವನೆಯು ಜನ ರಲ್ಲಿ ನೆಲೆನಿಂತುಬಿಟ್ಟಿದೆ.

ಈ ಎಲ್ಲಾ ದೌರ್ಬಲ್ಯಗಳ ನಿರ್ಮೂಲನವಾದ ಹೊರತು ಭಾರತವು ಅಂತರ್ರಾಷ್ಟ್ರೀಯ ಕ್ಷೇತ್ರದಲ್ಲಿ ತನ್ನ ಪೂರ್ಣ ವರ್ಚಸ್ಸನ್ನು ಬೀರಲಾರದು. ಈಗಾಗಲೇ ಈ ದೌರ್ಬಲ್ಯಗಳನ್ನು ನಿವಾರಿಸಲು ಮಹಾಪ್ರಯತ್ನಗಳು ನಡೆ ಯುತ್ತಿವೆ. ರಾಷ್ಟ್ರೀಯ ಸರಕಾರವು ಆಡಳಿತೆ ವಹಿಸಿದಂದಿನಿಂದ ಹಲವಾರು ಯೋಜನೆಗಳು ಆಚರಣೆಗೆ ಬಂದಿವೆ. ಹದಿನೈದು ವರ್ಷಗಳೊಳಗೆ ಎಲ್ಲ ರನ್ನೂ ಸಾಕ್ಷರರನ್ನಾಗಿ ಮಾಡುವ ಪ್ರಯತ್ನ ನಡೆಯುತ್ತಿದೆ. ಹಲವು ನೀರಾ ವರಿ ಯೋಜನೆಗಳೂ, ವಿದ್ಯುದುತ್ಪಾದನೆಯ ಯೋಜನೆಗಳೂ ಪ್ರಾರಂಭ ವಾಗಿವೆ. ಕೃಷಿ, ಕೈಗಾರಿಕೆಗಳ ಅಭಿವೃದ್ಧಿಗಾಗಿ ಇನ್ನೂ ಎಷ್ಟೋ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಖ್ಯವಾಗಿ ಭಂಡವಾಳ, ಯಂತ್ರಗಳು, ತಾಂತ್ರಿಕ ಸಲಹೆ; ಇವುಗಳು ನಮ್ಮಲ್ಲಿದ್ದುದು ಸಾಲದುದರಿಂದ ಹೊರಗಿನಿಂದ ಪಡೆಯುವ ವ್ಯವಸ್ಥೆಯಾಗಿದೆ. ಇವೆಲ್ಲವುಗಳ ಪರಿಣಾಮವಾಗಿ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸಿದಂತೆ ಜನಜೀವನದಲ್ಲಿ ಹಾಗೂ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಈಗ ಕಂಡು ಬರುತ್ತಿರುವ ಸ್ವಾರ್ಥ, ಲಂಚ ಗುಳಿತನ ಮಾಯವಾಗಿ ರಾಷ್ಟ್ರಪ್ರೇಮವು ಬಲವಾಗುವುದು; ಭಾರತವು ಜಗತ್ತಿನಲ್ಲಿ ತನ್ನ ಪೂರ್ಣ ಪ್ರಭಾವವನ್ನು ಬೀರಲು ಶಕ್ತವಾಗುವುದು.

—

ನೆಹರು ತತ್ವ.

1947ನೇ ಅಗೋಸ್ತು 15ರ ದಿನ. ಭಾರತವು ಸ್ವತಂತ್ರವಾಗಿದೆ. ಇಡೀ ಪ್ರಪಂಚವು ಕುತೂಹಲದಿಂದ ಈ ಹೊಸ ರಾಷ್ಟ್ರದ ಜನನವನ್ನು ನೋಡುತ್ತಿದೆ. ಅಂತರ್ರಾಷ್ಟ್ರೀಯ ರಂಗದಲ್ಲಿ ಈ ರಾಷ್ಟ್ರವು ಯಾವ ಪಾತ್ರವನ್ನು ವಹಿಸುವುದು ಎಂಬುದೇ ಎಲ್ಲಾ ರಾಷ್ಟ್ರಗಳ ಕುತೂಹಲಕ್ಕೆ ಕಾರಣವಾಗಿತ್ತು. ಆ ಸಮಯದಲ್ಲಿ ಜಗತ್ತಿನ ಪರಿಸ್ಥಿತಿಯು ಬಹಳ ಅಸ್ತವ್ಯಸ್ತವಾಗಿತ್ತು. ದ್ವಿತೀಯ ಮಹಾಯುದ್ಧವು ಆಗತಾನೇ ಕೊನೆಗೊಂಡು ರಾಷ್ಟ್ರಗಳೆಲ್ಲವೂ ಉಸುರ್ಗರೆಯುತ್ತಿದ್ದುವು. ಸೋತ ರಾಷ್ಟ್ರಗಳು ಅಸಹಾಯವಾಗಿ ಬಿದ್ದುಕೊಂಡು ಹಲವಾರು ಬೇನೆಗಳಿಗೆ ಬಲಿಯಾಗಿದ್ದುವು; ಮಾತ್ರವಲ್ಲದೆ ಸುತ್ತಲಿನ ರಾಷ್ಟ್ರಗಳಿಗೂ ಈ ಸೋಂಕನ್ನು ಹಬ್ಬಿಸುತ್ತಿದ್ದುವು. ಗೆದ್ದ ರಾಷ್ಟ್ರಗಳೊಳಗೆ ಯುದ್ಧ ಕಾಲದಲ್ಲಿ ಕಂಡು ಬಂದ ಒಮ್ಮತವು ಮಾಯವಾಗಿ ಪರಸ್ಪರ ಸಂಶಯ, ಭೀತಿ, ದ್ವೇಷಗಳು ತಿರುಗಿ ತಲೆಯೆತ್ತುತ್ತಿದ್ದುವು. ಸಾಮ್ರಾಜ್ಯಶಾಹಿಗಳ ಪಂಜಗಳೊಳಗೆ ಸಿಕ್ಕಿಬಿದ್ದು ನರಳುತ್ತಿದ್ದ ರಾಷ್ಟ್ರಗಳೆಲ್ಲಾ ಸ್ವಾತಂತ್ರ್ಯಕ್ಕಾಗಿ ಚಡಪಡಿಸುತ್ತಿದ್ದುವು. ಯುದ್ಧಕಾಲದ ಆರ್ಥಿಕ ವ್ಯವಸ್ಥೆಯನ್ನು ಶಾಂತಿಕಾಲಕ್ಕೆ ಹೊಂದಿಸಬೇಕಾದ ಮಹಾಕೆಲಸವು ಎಲ್ಲಾ ರಾಷ್ಟ್ರಗಳಲ್ಲಿಯೂ ಕಾದಿತ್ತು. ಯುದ್ಧ ಕಾಲದ ಕೃತಕ ಸಮೃದ್ಧಿಯನ್ನೂ ಪೂರ್ಣ ಉದ್ಯೋಗವನ್ನೂ ಶಾಂತಿಕಾಲದಲ್ಲಿ ಕಾಪಾಡಿಕೊಳ್ಳಬೇಕಾಗಿತ್ತು. ಯುದ್ಧ ಮುಗಿದೊಡನೆಯೇ ಬರುವುದೆಂದು ಹಾರೈಸಿದ್ದ ಸುಭಿಕ್ಷವು ಬಾರದ್ದಕ್ಕಾಗಿ ಜನರೆಲ್ಲರೂ ತಾಳ್ಮೆಗೆಟ್ಟಿದ್ದರು.

ಇಂತಹ ಪರಿಸ್ಥಿತಿಯಲ್ಲಿ ವಿದೇಶ ವ್ಯವಹಾರವನ್ನು ಬಹುಕಾಲದಿಂದ ನಡೆಸಿ ಪಳಗಿದ ರಾಷ್ಟ್ರಗಳೂ ಕೂಡ ತಡವರಿಸುತ್ತಿದ್ದುವು. ಭಾರತವಂತೂ ಆಗ ತಾನೇ ಸ್ವತಂತ್ರವಾಗುತ್ತಿದೆ. ವಿದೇಶ ವ್ಯವಹಾರವನ್ನು ನಡೆಸಿದ ಅನುಭವ ಏನೂ ಇಲ್ಲ. ಮಾತ್ರವಲ್ಲ ಅದಕ್ಕೆ ತಕ್ಕ ಸಿಬಂದಿಯೂ ಇಲ್ಲ. ಅನ್ಯ ರಾಷ್ಟ್ರಗಳೊಡನೆ ರಾಯಭಾರವನ್ನು ನಡೆಸಲು ಬಹುಕಾಲ ತರಬೇತಿ ಹೊಂದಿದ ಹಾಗೂ ಅನುಭವಶಾಲಿಗಳಾದ ಮುತ್ಸದ್ದಿಗಳ ಒಂದು ತಂಡವೇ ಬೇಕಾಗುತ್ತದೆ. ಭಾರತದಲ್ಲಿ ಅಂಥವರ ಕೊರತೆ ಅಂದು ಬಹಳವಾಗಿತ್ತು. ಮೇಲಾಗಿ

ಭಾರತವು ಜನನಕ್ಕೆ ಬರುವಾಗಲೇ ಶಸ್ತ್ರ ಚಿಕಿತ್ಸೆ ನಡೆದು ದೇಶದ ಕೆಲವು ಭಾಗಗಳನ್ನು ಪಾಕಿಸ್ಥಾನವಾಗಿ ನಿರ್ಮಿಸಲಾಗಿತ್ತು. ಈ ವಿಭಜನೆಯಿಂದಾಗಿ ಹಲವಾರು ಸಮಸ್ಯೆಗಳು ಉದ್ಭವವಾಗಿದ್ದುವು. ಹೀಗಾಗಿ ಭಾರತವು ಜಗತ್ತಿನ ಇತರ ರಾಷ್ಟ್ರಗಳಿಗೆಲ್ಲಾ ಸಾಮಾನ್ಯವಾಗಿದ್ದ ಸಮಸ್ಯೆಗಳನ್ನಷ್ಟೇ ಎದುರಿಸು ವುದಲ್ಲದೆ ತನ್ನದೇ ಆದ ಕೆಲವು ವಿಶಿಷ್ಟ ಸಮಸ್ಯೆಗಳನ್ನೂ ಸಮರ್ಪಕವಾಗಿ ಎದುರಿಸಬೇಕಾಗಿತ್ತು.

ಇದಲ್ಲದೆ ಹೊಸತಾಗಿ ಜನನವಾದ ಒಂದು ರಾಷ್ಟ್ರವು ಪ್ರಾರಂಭದಿಂದಲೇ ಉತ್ತಮ ಆದರ್ಶಗಳನ್ನಿಟ್ಟುಕೊಂಡು ಮುನ್ನಡೆಯಬೇಕಾಗುತ್ತದೆ. ಮುಂದಿನ ಪೀಳಿಗೆಗೆ ಉತ್ತಮ ಪರಂಪರೆಯನ್ನು ನಿರ್ಮಿಸಿ ಕೊಡಬೇಕಾದ ಜವಾಬ್ದಾರಿ ಯಿರುತ್ತದೆ. ಹಾಗಲ್ಲದೆ ಪ್ರಾರಂಭದಲ್ಲಿಯೇ ಸ್ವಾರ್ಥ, ವಂಚನೆ, ಸಮಯ ಸಾಧಕತೆಗಳ ಮಾರ್ಗವನ್ನು ಹಿಡಿದರೆ ಮುಂದೆ ಅದನ್ನು ಬಿಟ್ಟು ಆದರ್ಶ ಮಾರ್ಗವನ್ನು ಹಿಡಿಯಬೇಕೆಂದರೂ ಸಾಧ್ಯವಾಗುವುದಿಲ್ಲ. ಕೆಸರಿನ ಕೂಪ ದಲ್ಲಿ ಸಿಕ್ಕಿದ ಮನುಷ್ಯನು ತಪ್ಪಿಸಿಕೊಳ್ಳಲು ಒದ್ದಾಡಿದಷ್ಟಕ್ಕೂ ಕೆಳಕೆಳಗೇ ಹೋಗುವಂತೆ ಒಮ್ಮೆ ದುರ್ಮಾರ್ಗವನ್ನು ಹಿಡಿದ ಮೇಲೆ ಅಲ್ಲಿಯೇ ಹೊಣೆ, ಹಿಡಿತಗಳುಂಟಾಗಿ ಅಲ್ಲಿಂದ ತಪ್ಪಿಸಿಕೊಂಡು ಸನ್ಮಾರ್ಗಕ್ಕೆ ಬರಲು ಬಹುಕಷ್ಟ ಸಾಧ್ಯವಾಗುವುದು. ಆದುದರಿಂದಲೇ ಲೋರ್ಡ್ ಮೌಂಟ್ ಬೇಟನ್ನರು ಪಾಕಿಸ್ಥಾನದ ವಿಷಯ ಹೇಳುವಾಗೊಮ್ಮೆ "ಸುಳ್ಳಿನ ಮೇಲೆ ಒಂದು ಜನಾಂಗ ವನ್ನು ಕಟ್ಟಲು ಸಾಧ್ಯವಿಲ್ಲ." ಎಂದು ಹೇಳಿದರು.

ಭಾಗ್ಯವಶಾತ್ ಭಾರತದ ವಿದೇಶ ಧೋರಣೆಯನ್ನು ರೂಪಿಸುವ ಭಾರವು ಪಂಡಿತ ಜವಾಹರಲಾಲ ನೆಹರುಗಳಂತಹ ಆದರ್ಶವಾದಿಗಳ ಪಾಲಿಗೆ ಬಿತ್ತು. ಅಂತರ್ರಾಷ್ಟ್ರೀಯತೆಯೇ ಅವರ ಸಾರ್ವಜನಿಕ ಜೀವನದ ಉಸಿರು. ಅವರ ಭಾಷಣಗಳು ಒಂದಿಲ್ಲೊಂದು ರೀತಿಯಿಂದ ಅಂತರ್ರಾಷ್ಟ್ರೀಯ ಪ್ರಶ್ನೆಗಳನ್ನು ಎತ್ತಿಕೊಳ್ಳದೆ ಇರುವುದಿಲ್ಲ. ಒಮ್ಮೆ ಅವರು ಕೊಂಗ್ರೆಸ್ ಅಧ್ಯಕ್ಷ ಪೀಠ ದಿಂದ ಮಾಡಿದ ಭಾಷಣದಲ್ಲಿ ರಾಷ್ಟ್ರೀಯ ಪ್ರಶ್ನೆಗಳು ಒಂದು ಪಾಲಷ್ಟಿದ್ದರೆ ಅಂತರ್ರಾಷ್ಟ್ರೀಯ ಪ್ರಶ್ನೆಗಳು ಮೂರು ಪಾಲಷ್ಟಿದ್ದುವು. ಇಂಥವರು ನಿರ್ದೇ

ಶಿಸಿದ ವಿದೇಶ ಧೋರಣೆಯು ಉಚ್ಚ ಆದರ್ಶಗಳಿಂದ ಕೂಡಿರುವುದು ಸ್ವಾಭಾವಿಕ. ಅಂತೆಯೇ ಭಾರತವು ಇಂದು ಅಂತರ್ರಾಷ್ಟ್ರೀಯ ರಂಗದಲ್ಲಿ ಬಹಳ ಗೌರವಕ್ಕೆ ಪಾತ್ರವಾಗಿದೆ.

ಈ ಸಂದರ್ಭದಲ್ಲಿ ಭಾರತವು ಈ ವರೆಗೆ ಅನುಸರಿಸಿದ ವಿದೇಶ ಧೋರಣೆಯು ಯಾವ ತತ್ವಗಳನ್ನನುಸರಿಸಿದೆ? ನಾವು ಈ ಮೊದಲು ವಿವೇಚಿಸಿದ ಅಂತರ್ರಾಷ್ಟ್ರೀಯ ತತ್ವಗಳು ಹಾಗೂ ಉದ್ದೇಶಗಳಿಗೆ ಅನುಗುಣವಾಗಿದೆಯೇ? ಕೇವಲ ಭಾರತದ ಹಿತವನ್ನಷ್ಟೇ ಸಾಧಿಸದೆ ಜಗತ್ತಿನ ಕಲ್ಯಾಣಕ್ಕಾಗಿ ಹೆಣಗುತ್ತಿದೆಯೇ? ಎಂದು ವಿಚಾರ ಮಾಡೋಣ.

ಮೊದಲಾಗಿ ನಮ್ಮ ವಿದೇಶ ಧೋರಣೆಯು **ಜಗತ್ತು ಒಂದು** ಎಂದು ಮನಗಂಡಿದೆ. ಆದುದರಿಂದ ಜಗತ್ತಿನ ಹಿತವನ್ನು ಸಾಧಿಸಲು ಜನ್ಮವೆತ್ತಿರುವ ವಿಶ್ವರಿ ಸಂಸ್ಥೆಗಳಿಗೆ ತನ್ನ ಪೂರ್ಣ ಬೆಂಬಲ ನೀಡಿದೆ. ಜಗತ್ತಿನ ಜನರಲ್ಲಿ ಅಂತರ್ರಾಷ್ಟ್ರೀಯ ಭಾವನೆ ಬೆಳೆಯುವಂತೆ ಆರ್ಥಿಕ ವಿಚಾರಗಳಲ್ಲಿ ಸಹಕಾರ— ಕಲೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ, ಇವುಗಳಲ್ಲಿ ವಿನಿಮಯ— ಇವುಗಳನ್ನು ಪ್ರೋತ್ಸಾಹಿಸುವ ಜಾಗತಿಕ ಸಂಘಗಳಿಗೆ ತನ್ನ ಸಹಕಾರವನ್ನು ನೀಡಿದೆ. ಸಂಯುಕ್ತ ಜನಾಂಗಗಳ ಸಂಘದ ಸದಸ್ಯ ರಾಷ್ಟ್ರವಾಗಿ ತನ್ನ ಪಾಲಿನ ಕರ್ತವ್ಯಗಳನ್ನು ನಿರ್ವಹಿಸುತ್ತಲಿದೆ. ಅದಲ್ಲದೆ ಜಗತ್ತಿನ ಒಂದು ಭಾಗದಲ್ಲಿ ಅತೀವ ಶ್ರೀಮಂತಿಕೆ, ಇನ್ನೊಂದು ಭಾಗದಲ್ಲಿ ಅಸಹನೀಯ ಬಡತನ— ಈ ಬಗೆಯ ವಿಷಮ ತೋಲತೆಯು ಜಗತ್ತಿನ ನೆಮ್ಮದಿಗೆ ಹಾನಿಕರವೆಂದು ಅಂತರ್ರಾಷ್ಟ್ರೀಯ ಪರಿಷತ್ತುಗಳಲ್ಲಿ ಸಾರುತ್ತಾ ಬಂದಿದೆ. ಇದೇ ರೀತಿ ವಿಶ್ವಬಾಂಧವ್ಯಕ್ಕೆ ಕಂಟಕವಾದ ಜಾತೀಯತೆ, ವರ್ಣದ್ವೇಷ, ಕಡುರಾಷ್ಟ್ರೀಯತೆ, ರಾಜಕೀಯ ಅಥವಾ ಆರ್ಥಿಕ ದಬ್ಬಾಳಿಕೆ ಇವುಗಳನ್ನು ವಿರೋಧಿಸುತ್ತಾ ಬಂದಿದೆ. ತಾನು ಸ್ವತಃ ಜಾತ್ಯಾತೀತ ರಾಷ್ಟ್ರವಾಗಿದೆ. ಹಾಗೆಯೇ ದಕ್ಷಿಣ ಆಫ್ರಿಕದಲ್ಲಿ ಬಿಳಿಜನರು ಹಿಂದೀಯರಿಗೆ ಹಾಗೂ ಆಫ್ರಿಕದ ಮೂಲ ನಿವಾಸಿಗಳಿಗೆ ತೋರಿಸುತ್ತಿರುವ ವರ್ಣದ್ವೇಷವನ್ನು ಪ್ರತಿಭಟಿಸಿದೆ. ಈ ವಿಷಯವನ್ನು ಸಂಯುಕ್ತರಾಷ್ಟ್ರಗಳ ಸಂಘದಲ್ಲಿ ಎತ್ತಿ ದಕ್ಷಿಣಾಫ್ರಿಕವನ್ನು ಆಪಾದನೆಗೆ

ಗುರಿಪಡಿಸಿದೆ. ಇದೇ ರೀತಿ ಅಮೇರಿಕದಲ್ಲಿರುವ ನೀಗ್ರೋ ಜನರಿಗೂ ಸಹಾನುಭೂತಿ ತೋರಿದೆ. ಬ್ರಿಟನ್, ಫ್ರಾನ್ಸ್, ಹೊಲ್ಲೆಂಡುಗಳು ನೈರುತ್ಯ ಏಷ್ಯಾದಲ್ಲಿ ವಸಾಹತು ಸಾಮ್ರಾಜ್ಯಗಳನ್ನಿಟ್ಟುಕೊಂಡಿರುವುದನ್ನು ಖಂಡಿಸಿದೆ. ಮಾತ್ರವಲ್ಲ ಇಂಡೋನೇಷ್ಯವು ಹೊಲ್ಲೆಂಡಿಗೆ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟ ನಡೆಸಿದಾಗ ಇಂಡೋನೇಷ್ಯಕ್ಕೆ ಬೆಂಬಲಕೊಟ್ಟು ಸ್ವತಂತ್ರವಾಗುವಂತೆ ಮಾಡಿದೆ. ಹೀಗೆ ನಮ್ಮ ವಿದೇಶ ಧೋರಣೆಯು ಸರ್ವವಿಧದಿಂದಲೂ ಜಾಗತಿಕ ಐಕ್ಯವನ್ನು ಸಾಧಿಸಲು ಯತ್ನಿಸುತ್ತಿದೆ.

ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಭಾರತವು ನೀತಿಪಥವನ್ನು ಬಿಡದೆ ಅನುಸರಿಸುತ್ತಿದೆ. ಅನ್ಯರಾಷ್ಟ್ರಗಳ ಅಸಹಾಯತೆಯ ದುರುಪಯೋಗ ಪಡೆಯುವುದು, ಅನ್ಯರಾಷ್ಟ್ರಗಳ ಹಿತಕ್ಕೆ ಭಂಗ ತಂದು ತನ್ಮೂಲಕ ಸ್ವಾರ್ಥವನ್ನು ಸಾಧಿಸುವ ಪ್ರಯತ್ನ ಮಾಡುವುದು— ಇವೇ ಮೊದಲಾದ ಶಕುನಿ ನೀತಿಯನ್ನು ಭಾರತವು ಎಂದೂ ಅನುಸರಿಸಿಲ್ಲ. ಬಲೂಚಿಸ್ಥಾನದ ಕಾಲಟ್ ಸಂಸ್ಥಾನವು ಭಾರತದೊಡನೆ ಸೇರ್ಪಡೆಗೊಳ್ಳಲಿಚ್ಛಿಸಿತು. ಅದೇ ಸಮಯದಲ್ಲಿ ಪಾಕಿಸ್ಥಾನವು ಭಾರತದಲ್ಲಿಯ ಜುನಾಗಢ, ಹೈದರಾಬಾದಗಳು ಭಾರತವನ್ನು ಸೇರದಂತೆ ಪುಸಲಾಯಿಸುತಿತ್ತು. ಆದರೂ ಭಾರತವು ದೇಶ ವಿಭಜನೆಯ ಕಾಲದಲ್ಲಿ ಒಪ್ಪಿದ ಮಾತಿನಂತೆ ಕಾಲಟಕ್ಕೆ ಪಾಕಿಸ್ತಾನವನ್ನೇ ಸೇರುವಂತೆ ಸಲಹೆಯಿತ್ತಿತು. ಪಾಕಿಸ್ಥಾನಕ್ಕೆ ತೊಂದರೆಯನ್ನುಂಟುಮಾಡಿ ತಾನು ಲಾಭ ಪಡೆಯಲು ಇಚ್ಛಿಸಲಿಲ್ಲ.

ಯುದ್ಧದ ಪರಿಹಾರ ಧನವಾಗಿ ಜರ್ಮನಿ, ಜಪಾನುಗಳಿಂದ ಕೆಲವೊಂದು ಕಾರ್ಖಾನೆಗಳನ್ನೂ ಯಂತ್ರಗಳನ್ನೂ ವಿಜಯಿ ರಾಷ್ಟ್ರಗಳೊಳಗೆ ಹಂಚಿದಾಗ ಭಾರತವು ತನ್ನ ಪಾಲಿಗೆ ಬಂದ ಈ ಅಮೂಲ್ಯ ಯಂತ್ರಗಳನ್ನು ಸ್ವೀಕರಿಸದೆ ಆ ರಾಷ್ಟ್ರಗಳಿಗೇ ಬಿಟ್ಟು ಬಿಟ್ಟಿತು. ಆ ರಾಷ್ಟ್ರಗಳ ಆರ್ಥಿಕ ಜೀವನಕ್ಕೆ ಬೇಕಾಗಿ ನಿರ್ಮಿಸಲ್ಪಟ್ಟ ಕಾರ್ಖಾನೆಗಳನ್ನು ಕಿತ್ತುಕೊಳ್ಳುವುದರಿಂದ ಅಲ್ಲಿಯ ಜನರ ಬಾಯಿಯ ತುತ್ತನ್ನು ಹೊಡೆದಂತಾಗುವುದು. ಇಂತಹ ಸ್ವಾರ್ಥಸಾಧನೆಗೆ ಭಾರತವು ಸಿದ್ಧವಿಲ್ಲ. ಮೊದಲೇ ಯುದ್ಧದಿಂದ

ಜರ್ಝರಿತವಾದ ರಾಷ್ಟ್ರಗಳನ್ನು ಈ ಬಗೆಯ ಹೊಡೆತವು ಇನ್ನಷ್ಟು ಕಂಗಾಲು ಮಾಡಿ ಬಿಡುವುದು. ಅಲ್ಲಿಯ ಜನರು ಈ ಅಮಾನುಷ ಕ್ರೌರ್ಯವನ್ನು ಎಂದೂ ಮರೆಯಲಾರರು. ಇದರಿಂದ ಅಂತರ್ರಾಷ್ಟ್ರೀಯ ಸ್ನೇಹಕ್ಕೆ ವಿಘಾತಕವಾಗುವುದು ಎಂದು ಭಾರತದ ಅಭಿಪ್ರಾಯ.

ಸಾಮ್ಯವಾದೀ ಚೀನವು ತಿಬೇಟನ್ನು ಆಕ್ರಮಿಸಿತು. ಆಗ ಭಾರತವು ಅಲ್ಲಿ ಹಸ್ತಕ್ಷೇಪ ಮಾಡಬಹುದಾದ ಎಷ್ಟೋ ಕಾರಣಗಳಿದ್ದುವು. ತಿಬೇಟಿನಲ್ಲಿ ಭಾರತಕ್ಕೆ ಕೆಲವೊಂದು ವಿಶೇಷ ಹಕ್ಕುಗಳಿದ್ದುವು. ಅಲ್ಲದೆ ಭಾರತದ ನೆರೆಯಲ್ಲಿಯ ಒಂದು ರಾಷ್ಟ್ರದ ಸ್ಥಿತಿಗತಿಯಲ್ಲಿ ವ್ಯತ್ಯಾಸಗಳಾಗುತ್ತಿರುವುದು ಭಾರತಕ್ಕೆ ಬಹಳ ಆಸ್ಥೆಯ ಪ್ರಶ್ನೆ. ಮಾತ್ರವಲ್ಲ ತಿಬೇಟಿನ ದೆಸೆಯಿಂದಾಗಿ ನಮಗೆ ಕೆಂಪು ಚೀನದೊಡನೆ ವಿರೋಧವುಂಟಾಗಿದ್ದರೆ ಅಮೇರಿಕದ ಬಣದ ರಾಷ್ಟ್ರಗಳಲ್ಲಿ ನಮ್ಮ ದರ್ಜೆಯು ಬಹು ಮೇಲಕ್ಕೆ ಏರಿ ಬಿಡುತಿತ್ತು. ಅಮೇರಿಕದಿಂದ ಹೇರಳ ಸಾಧನ, ಸಾಮುಗ್ರಿ, ಸಂಪತ್ತುಗಳು ದೊರೆಯುತಿದ್ದುವು. ಅದಲ್ಲದೆ ಭಾರತವು ಪ್ರತ್ಯಕ್ಷವಾಗಿ ತಿಬೇಟಿನ ರಕ್ಷಣೆಗಿಳಿದಿದ್ದರೆ ಬಹುಶಃ ತಿಬೇಟವು ಭಾರತದ ಉಡಿಯಲ್ಲಿ ಬೀಳುತಿದ್ದಿತು. ಈ ಎಲ್ಲಾ ಸ್ವಂತ ಲಾಭಗಳನ್ನೂ ಗಣಿಸದೆ ನ್ಯಾಯವನ್ನೇ ಮಾಡಿದೆ ನಮ್ಮ ಭಾರತ. ಜಗತ್ತಿನ ಇತಿಹಾಸದಲ್ಲಿಯೇ ಇಂತಹ ಸ್ವಾರ್ಥತ್ಯಾಗ ಯಾವ ರಾಷ್ಟ್ರದಿಂದಲೂ ಆಗಿಲ್ಲ.

ಹೀಗೆ ಅನ್ಯರಾಷ್ಟ್ರಗಳಿಗೆ ತಾನು ಅನ್ಯಾಯವನ್ನು ಮಾಡದಿರುವುದು ಮಾತ್ರವೇ ಅಲ್ಲದೆ ಯಾವ ರಾಷ್ಟ್ರಕ್ಕೇ ಆಗಲಿ, ಅನ್ಯಾಯವಾಗುತಿದ್ದರೆ ಅದಕ್ಕೆ ತನ್ನಿಂದಾದ ಸಹಾಯವನ್ನು ಭಾರತವು ಮಾಡುತ್ತದೆ. ಮ್ಯೂನಿಕ್ ಒಪ್ಪಂದದಲ್ಲಿ ಬ್ರಿಟನ್ನು ತನ್ನನ್ನು ಉಳಿಸಿಕೊಳ್ಳಲು ಜಕೊಸ್ಲೊವಾಕಿಯವನ್ನು ಬಲಿಗೊಟ್ಟಂತೆ ಭಾರತವೆಂದೂ ಮಾಡುವುದಿಲ್ಲ. ಕಾಶ್ಮೀರವು ಪಾಕಿಸ್ಥಾನವನ್ನು ಸೇರಲೊಪ್ಪದುದರಿಂದ ಗಡಿನಾಡಿನ ಪಠಾಣರನ್ನು ಪಾಕಿಸ್ಥಾನವು ಕಾಶ್ಮೀರದ ಮೇಲೆ ಛೂ ಬಿಟ್ಟಿತು. ಆಗ ಕಾಶ್ಮೀರವು ಭಾರತದ ಮರೆಹೊಕ್ಕಿತು. ಕೂಡಲೇ ಭಾರತವು ಕಾಶ್ಮೀರದ ರಕ್ಷಣೆಗೆ ಧಾವಿಸಿ ದಾಳಿಗರನ್ನು ತಡೆಯಿತು.

ಕಾಶ್ಮೀರವನ್ನು ಉಳಿಸಿತು. ಇದಕ್ಕಾಗಿ ಭಾರತವು ಎಷ್ಟೋ ಕಷ್ಟನಷ್ಟಗಳಿಗೀಡಾಯಿತು. ಆದರೆ ಒಂದು ಕಡೆಯಲ್ಲಿ ಆಕ್ರಮಣ ಕ್ರಿಯೆಯನ್ನು ವಿರೋಧಿಸದೆ ಬಿಟ್ಟರೆ ಅದು ಇನ್ನೊಂದು ಕಡೆಯಲ್ಲಿ ಇನ್ನೂ ಪ್ರಬಲ ರೀತಿಯಲ್ಲಿ ತಲೆಯೆತ್ತುವುದು ಎಂಬ ಸತ್ಯವನ್ನು ಭಾರತವು ಅರಿತಿದೆ. ಅಂತೆಯೇ ಕಾಶ್ಮೀರದಲ್ಲಿ ಪಾಕಿಸ್ಥಾನದ ಆಕ್ರಮಣವನ್ನು ಎದುರಿಸಿತು.

ಕಾಶ್ಮೀರವು ಸ್ವಸಂತೋಷದಿಂದ ಪಾಕಿಸ್ಥಾನವನ್ನು ಸೇರಿದ್ದರೆ ಭಾರತವು ಸರ್ವಥಾ ಆಕ್ಷೇಪಿಸುತ್ತಿರಲಿಲ್ಲ. ಹೀಗೆಂದು ಲೋರ್ಡ್ ಮೌಂಟ್ ಬೇಟನ್ನರ ಮುಖಾಂತರ ಕಾಶ್ಮೀರದ ಮಹಾರಾಜರಿಗೆ ದಿವಂಗತ ಸರ್ದಾರ ಪಟೇಲರೇ ಹೇಳಿಕಳುಹಿಸಿದ್ದರು. ಆದರೆ ಬಲಾತ್ಕಾರದಿಂದ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪಾಕಿಸ್ಥಾನವು ಪ್ರಯತ್ನಿಸಿದ್ದರಿಂದ ಭಾರತವು ಪ್ರವೇಶ ಮಾಡಬೇಕಾಯಿತು; ಅಲ್ಲದೆ ಕಾಶ್ಮೀರವನ್ನು ಬಗಲಿಗೆ ಹಾಕಿಕೊಳ್ಳಬೇಕೆಂಬ ದುರಾಸೆಯಿಂದಲ್ಲ. ಕಾಶ್ಮೀರವು ಭಾರತಕ್ಕೆ ಅಷ್ಟೊಂದೇನೂ ಅವಶ್ಯವಾದ ಪ್ರದೇಶವಲ್ಲ. ಅದಕ್ಕಿಂತಲೂ ಅಮೂಲ್ಯವಾದ ಪ್ರದೇಶಗಳನ್ನು ಪ್ರತ್ಯೇಕಿಸಿ ಪಾಕಿಸ್ಥಾನ ರಚಿಸಲು ಭಾರತವು ಒಪ್ಪಿದೆ. ಪಾಕಿಸ್ಥಾನಕ್ಕಾದರೋ ಅದರ ಜೀವಿತಕ್ಕೇ ಕಾಶ್ಮೀರವು ಅವಶ್ಯವಂತೆ. ಇದರಿಂದಲೇ ತಿಳಿಯುವುದು ಭಾರತದ ನಿಲುವು ಎಷ್ಟು ನಿಸ್ವಾರ್ಥದ್ದು ಎಂದು. ಹೀಗೆ **ಅಂತರಾಷ್ಟ್ರೀಯ ನೀತಿ**ಯನ್ನು ತಪ್ಪದೆ ಪಾಲಿಸುತ್ತಾ ಬಂದಿದೆ ನಮ್ಮ ವಿದೇಶ ಧೋರಣೆ.

ನಮ್ಮ ವಿದೇಶ ಧೋರಣೆಯ ಇನ್ನೊಂದು ಧ್ಯೇಯವೆಂದರೆ **ವಿಶ್ವಶಾಂತಿ.** ಆದುದರಿಂದಲೇ ಕೊರಿಯಾ ಯುದ್ಧದ ಸಮಯದಲ್ಲಿ ಉತ್ತರ ಕೊರಿಯಾದ ಆಕ್ರಮಣ ಕ್ರಿಯೆಯನ್ನು ಖಂಡಿಸಿದರೂ ಶಾಂತಿ ಮಾರ್ಗದಿಂದಲೇ ವಿವಾದ ತೀರ್ಮಾನಕ್ಕೆ ಪ್ರಯತ್ನಿಸಿ ನೋಡಬೇಕೆಂದು ಭಾರತವು ಅಭಿಪ್ರಾಯಪಟ್ಟಿತು. ನಂತರ ಯುದ್ಧವು ನೆರೆ ರಾಷ್ಟ್ರಗಳಿಗಾದರೂ ಹಬ್ಬದಿರಲೆಂದು ಉತ್ತರ, ದಕ್ಷಿಣ ಕೊರಿಯಾಗಳ ಗಡಿಯಾದ 38ನೇ ಅಕ್ಷಾಂಶವನ್ನು ದಾಟಬಾರದೆಂದು ವಿನಂತಿಸಿತು. ಅಷ್ಟಕ್ಕೂ ಬಿಡದೆ ನೆಹರುಗಳು ಸ್ವಂತವಾಗಿ ಅಮೇರಿಕದ ಅಧ್ಯಕ್ಷ ಟ್ರೂಮನ್, ರಷ್ಯದ ಮುಖಂಡ ಸ್ಟಾಲಿನ್,

ಇವರಿಗೆ ಶಾಂತಿ ಸಾಧಿಸಬೇಕೆಂದು ಪತ್ರ ಬರೆದರು. ಹೀಗೆ ಸರ್ವವಿಧದಿಂದಲೂ ಶಾಂತಿಯನ್ನು ಕಾಪಾಡುವುದೇ ನಮ್ಮ ವಿದೇಶ ಧೋರಣೆಯ ಗುರಿಯಾಗಿದೆ.

ಇದಕ್ಕನುಕೂಲವಾಗುವಂತೆ ನಮ್ಮ ರಾಷ್ಟ್ರವು ಜಗತ್ತಿನ ಎಲ್ಲಾ ರಾಷ್ಟ್ರಗಳೊಡನೆಯೂ ಮೈತ್ರಿಯಿಂದಿರಲು ಇಚ್ಛಿಸುತ್ತದೆ. ಅಂತೆಯೇ **ಎರಡು ಧ್ರುವಗಳಂತೆ** ಇಬ್ಬಣಗಳಾಗಿರುವ ರಾಷ್ಟ್ರಗಳೊಡನೆ ಏಕ ಪ್ರಕಾರವಾಗಿ ವ್ಯವಹಾರವನ್ನಿಟ್ಟುಕೊಂಡಿದೆ. ತನ್ನಂತಹ ದೊಡ್ಡ ರಾಷ್ಟ್ರವು ಸಮಬಲವಾದ ಎರಡು ಬಣಗಳಲ್ಲಿ ಯಾವುದನ್ನು ಸೇರಿದರೂ ಇನ್ನೊಂದಕ್ಕೆ ಭೀತಿಯು ಹೆಚ್ಚುತ್ತದೆ. ಇದರಿಂದ ಶಾಂತಿ ಸಾಧಿಸುವ ಬದಲಿಗೆ ಇನ್ನಷ್ಟು ದ್ವೇಷವೇ ಹೆಚ್ಚುವುದು ಎಂದು ಭಾರತದ ಅಭಿಪ್ರಾಯ. ಅಲ್ಲದೆ ಒಂದು ರಾಷ್ಟ್ರವು ಪ್ರತಿಯೊಂದು ಪ್ರಶ್ನೆಯನ್ನೂ ಸ್ವತಂತ್ರವಾಗಿ ವಿಚಾರಮಾಡಿ ತನಗೆ ನ್ಯಾಯವೆಂದು ಕಂಡು ಬಂದ ಪಕ್ಷಕ್ಕೆ ತನ್ನ ಬೆಂಬಲ ಕೊಡಬೇಕೇ ಹೊರತು ತನ್ನ ಪಕ್ಷದವರೆಂಬ ದಾಕ್ಷಿಣ್ಯದಿಂದ ಮಾಡುವ ನಿರ್ಧಾರವು ನ್ಯಾಯವಾಗಲಾರದು; ಅಂತೆಯೇ ಅದು ಶಾಂತಿಯನ್ನು ಸಾಧಿಸಲಾರದು.

ಬ್ರಿಟನ್ನು ಜಪಾನೀ ಶಾಂತಿ ಒಪ್ಪಂದವನ್ನು ಮೊದಲು ಟೀಕಿಸಿತು. ನಂತರ ಅಮೇರಿಕದ ಒತ್ತಾಯದಿಂದ ಸಹಿಮಾಡಿತು. ಹೀಗೆ ಒಂದು ಪಕ್ಷವನ್ನು ಸೇರಿದ ಮೇಲೆ ವ್ಯವಹಾರ ಸ್ವಾತಂತ್ರ್ಯ ಉಳಿಯುವುದಿಲ್ಲ. ಭಾರತವು ಯಾವ ಪಕ್ಷವನ್ನೂ ಸೇರಿಲ್ಲದುದರಿಂದ ಒಪ್ಪಂದವನ್ನು ಟೀಕಿಸಿದುದಲ್ಲದೆ ಸಹಿ ಹಾಕಲೂ ನಿರಾಕರಿಸಿತು.

ಆದುದರಿಂದ ಯಾವ ವಿವಾದದಲ್ಲಿಯೇ ಆಗಲಿ, ನ್ಯಾಯವಿರುವ ಪಕ್ಷವನ್ನು ಭಾರತವು ಸಮರ್ಥಿಸುತ್ತದೆ. ಇದನ್ನು ಎಲ್ಲಾ ರಾಷ್ಟ್ರಗಳೂ ತಿಳಿದಿರಬೇಕು. ಹಾಗಿಲ್ಲದೆ ವಿಚಾರವಿಲ್ಲದೆ ತಾನಂದಂತೆ ಕುಣಿಯುತ್ತಾ ತಮ್ಮ ಜತೆಯಲ್ಲಿರಬೇಕು ಎಂಬ ಧೋರಣೆಯನ್ನು ಭಾರತವು ಎಂದೂ ಒಪ್ಪಲಾರದು. ಅದು ಭಾರತದ ಗೌರವಕ್ಕೇ ಕುಂದು ತರುವಂತಹುದಾಗಿದೆ.

ಮಾತ್ರವಲ್ಲ ಹಾಗೆ ನಿರೀಕ್ಷಿಸುವ ರಾಷ್ಟ್ರಗಳಿಗೆ ಭಾರತದ ನ್ಯಾಯ ಬುದ್ಧಿಯಲ್ಲಿ ವಿಶ್ವಾಸವಿಲ್ಲಂದಾಗುವುದು.

ಅಮೇರಿಕವು ಭಾರತಕ್ಕೆ ಎರಡು ಮಿಲಿಯ ಟನ್ ಗೋದಿಯನ್ನು ಸಾಲಕೊಡುವಾಗ ಭಾರತದ ವಿದೇಶ ಧೋರಣೆಯು ಅಮೇರಿಕಕ್ಕೆ ಅನುಕೂಲವಾಗಿಲ್ಲವೆಂದು ಟೀಕಿಸಲ್ಪಟ್ಟಿತು. ಆಗ ಜವಾಹರಲಾಲ ನೆಹರುಗಳು "ನಮ್ಮ ಆತ್ಮಗೌರವಕ್ಕೆ ಅಘಾತವನ್ನುಂಟುಮಾಡುವ ಯಾವುದಾದರೂ ಶರ್ತವಿಟ್ಟು ಆಹಾರ ಧಾನ್ಯವನ್ನು ಕೊಡುವುದಾದರೆ, ನಾವು ಉಪವಾಸ ಮಾದರೂ ಬೀಳುವೆವು; ಅಂತಹ ಆಹಾರವನ್ನು ಸ್ವೀಕರಿಸಲಾರೆವು" ಎಂದು ಹೇಳಿಬಿಟ್ಟರು. ಆಗ ಪ್ರತಿಯೊಬ್ಬ ಭಾರತೀಯನ ಹೃದಯವೂ "ಭಲೇ" ಎಂದಿತು.

ಆದರೂ ಎರಡೂ ಬಣಗಳಿಗೆ ಸೇರದ ರಾಷ್ಟ್ರಗಳನ್ನೇ ಸೇರಿಸಿ ತೃತೀಯ ಪಕ್ಷವೊಂದನ್ನು ನಿರ್ಮಿಸಬಹುದು ಎಂಬ ಒಂದು ಅಭಿಪ್ರಾಯವಿದೆ. ಆದರೆ ಇದರಿಂದ ಪಾಕಿಸ್ಥಾನದಂತಹ ರಾಷ್ಟ್ರಗಳಿಗೆ ಭಾರತವು ತನ್ನ ಪ್ರಾಧಾನ್ಯಕ್ಕಾಗಿ ಈ ಆಟ ಹೂಡಿದೆ ಎಂಬ ಸಂಶಯ ಬರುವುದು. ಅದಲ್ಲದೆ ಈಗ ಎರಡೇ ಬಣಗಳೊಳಗೆ ದ್ವೇಷವಿದ್ದರೆ ಆಗ ಮೂರು ಬಣಗಳೊಳಗೆ ಮೇಲಾಟ ಪ್ರಾರಂಭವಾಗುವುದು. ಅದರಿಂದ ಶಾಂತಿಯ ಸಾಧನೆಯಾಗುವುದಿಲ್ಲ. ಜಾಗತಿಕ ಶಾಂತಿ ಸಾಧನೆಗಾಗಿ ಸಂಯುಕ್ತ ಜನಾಂಗಗಳ ಸಂಘವಿರುವಾಗ, ಈ ಬಗೆಯ ಒಳಕೂಟಗಳು ಸಮಗ್ರತೆಯ ದೃಷ್ಟಿಯನ್ನು ಸಂಕುಚಿತಗೊಳಿಸಿ ಆ ಸಂಘದ ಉದ್ದೇಶ ಸಾಧನೆಗೆ ಅಡ್ಡಿಯಾಗುತ್ತವೆ.

ವಿದೇಶ ವ್ಯವಹಾರದಲ್ಲಿ ಯಾವ ಪಕ್ಷ, ಬಣ, ಕೂಟಗಳನ್ನು ಭಾರತವು ಸೇರದಿದ್ದರೂ, ರಾಷ್ಟ್ರದ ಏಳಿಗೆಗೆ ಸಾಧಕವಾದ ವಿದೇಶೀ ಸಹಾಯವನ್ನು ಸದಾ ಸ್ವಾಗತಿಸುತ್ತದೆ. ಆರ್ಥಿಕ ದುಸ್ಥಿತಿಯಿಂದಾಗಿ **ಭಾರತದ ಭಾರವು** ಬಹುಮಟ್ಟಿಗೆ ಕಡಮೆಯಾಗಿದೆ; ಇದರ ನಿವಾರಣೆಗೆ ಹೊರಗಿನ ಸಹಾಯವು ಅಗತ್ಯ ಎಂದು ಭಾರತಕ್ಕೆ ಮನವರಿಕೆಯಾಗಿದೆ. ಆದರೆ ಅಂತಹ ಸಹಾಯದ ಜತೆಯಲ್ಲಿ ನಮ್ಮ ಆತ್ಮ ಗೌರವಕ್ಕೆ ಕುಂದನ್ನು ತರುವ ಅಥವಾ ನಮ್ಮನ್ನು

ಹಂಗಿನಲ್ಲಿ ಸಿಕ್ಕಿಸುವ ಶರ್ತಗಳಿರಬಾರದು ಎಂದು ಭಾರತದ ನಿರ್ಧಾರ.

ಈ ಬಗೆಯ ಉಚ್ಚ ತತ್ವಗಳಿಂದಲೂ, ಶ್ರೇಷ್ಟ ಧ್ಯೇಯಗಳಿಂದಲೂ, ಘನವಾದ ಉದ್ದೇಶಗಳಿಂದಲೂ ಪ್ರೇರಿತವಾದ ನಮ್ಮ ವಿದೇಶ ಧೋರಣೆಯು ಜಗತ್ತಿನಲ್ಲಿಯೇ ಸನ್ಮಾನ್ಯತೆಯನ್ನು ಪಡೆಯುತ್ತಿದೆ. ಹಲವೊಮ್ಮೆ ನಮ್ಮ ವಿದೇಶ ಧೋರಣೆಯು ಕೆಲವೊಂದು ರಾಷ್ಟ್ರಗಳಿಗೆ ಅನಾನುಕೂಲವಾಗ ಬಹುದು. ಅವರ ಸ್ವಾರ್ಥೋದ್ದೇಶಗಳಿಗೆ ಅಡ್ಡ ಬಂದಿರಬಹುದು. ಅಂತೆಯೇ ಆ ರಾಷ್ಟ್ರಗಳು ನಮ್ಮ ನಿಲುವೆಯನ್ನು ಖಂಡಿಸಬಹುದು. ನಮ್ಮನ್ನು ತೆಗಳಬಹುದು. ಆದರೆ ನಮ್ಮ ಉದ್ದೇಶದ ಪರಿಶುದ್ಧತೆಯ ಕುರಿತು ಯಾರೂ ಪ್ರಶ್ನಿಸಲಾರರು. ಜಾತಿಕ ಪರಿಷತ್ತುಗಳಲ್ಲಿ ಪ್ರತಿಯೊಂದು ರಾಷ್ಟ್ರವೂ ಪ್ರತಿಯೊಂದು ಪ್ರಶ್ನೆಯನ್ನೂ ತಮ್ಮ ತಮ್ಮ ಸ್ವಾರ್ಥದ ದೃಷ್ಟಿಯಿಂದ ವಿಮರ್ಶಿಸುತ್ತಿರುವಾಗ ಭಾರತವೊಂದು ಮಾತ್ರ ವಿಶ್ವವಿಶಾಲ ದೃಷ್ಟಿಯಿಂದ, ನಿಷ್ಪಕ್ಷಪಾತ ಬುದ್ಧಿಯಿಂದ ತನ್ನ ನಿರ್ಧಾರಗಳನ್ನು ಮುಂದಿಡುತ್ತಿರುವುದು ಎಲ್ಲಾ ರಾಷ್ಟ್ರಗಳನ್ನೂ ಬೆರಗುಗೊಳಿಸುತ್ತಿದೆ. ನಿಜವಾಗಿಯೂ ಇಂದು ಭಾರತವು ಎಲ್ಲಾ ರಾಷ್ಟ್ರಗಳ ಪ್ರೀತಿಗಲ್ಲದಿದ್ದರೂ ಗೌರವಕ್ಕೆ ಖಂಡಿತ ಪಾತ್ರವಾಗಿದೆ.

ಇಂತಹ ವಿದೇಶ ಧೋರಣೆಯು ಪಂಡಿತ ಜವಾಹರಲಾಲ ನೆಹರುಗಳಿಗೆ ಮಾತ್ರ ಸಾಧ್ಯ. ಅವರಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳೆರಡೂ ಸಮನ್ವಯಗೊಂಡಿವೆ. ಅದಲ್ಲದೆ ಅವರು ಗಾಂಧೀಜಿಯವರ ಪಟ್ಟದ ಶಿಷ್ಯ. ಅಂತೆಯೇ ಅವರು ಇಡೀ ಜಗತ್ತನ್ನೇ ಏಕಪ್ರಕಾರವಾಗಿ ನೋಡಬಲ್ಲಷ್ಟು ವಿಶಾಲಹೃದಯಿಗಳಾಗಿರುವರು. ಒಂದು ವಿಷಯದಲ್ಲಿ ವಿರೋಧವು ಗಂಟಿಕ್ಕಿ ದವರೊಡನೆ ಇನ್ನೊಂದು ವ್ಯವಹಾರದಲ್ಲಿ ಮೊದಲಿನ ವಿರೋಧದ ಪರಿವೆಯೇ ಇಲ್ಲವೆಂಬಂತೆ ವ್ಯವಹರಿಸಬಲ್ಲಷ್ಟು ಉದಾರ ಬುದ್ಧಿ ಅವರದು. ಭಾರತವು ಸ್ವತಂತ್ರವಾದ ಮೇಲೆ ಕೊಮನ್ ವೆಲ್ತಿನಲ್ಲಿ ಇರುವ ಪ್ರಶ್ನೆ ಎದ್ದಿತು. ನೆಹರುಗಳು ಭಾರತವು ಕೊಮನ್ ವೆಲ್ತಿನಲ್ಲಿಯೇ ಇರಬೇಕೆಂದು ನಿರ್ಧ ರಿಸಿದರು. ಬ್ರಿಟಿಷರೊಡನೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿ ನಂತರ

ಬ್ರಿಟಿಷರೊಡನೆಯೇ ಸಂಪರ್ಕವಿಟ್ಟುಕೊಳ್ಳುವ ವಿಶಾಲ ಬುದ್ಧಿ ಇವರಲ್ಲಿದೆ ಎಂದು ಯಾರೂ ಎಣಿಸಿರಲಿಲ್ಲ. ವಿನ್ಸ್ಟನ್ ಚರ್ಚಿಲ್ಲರು ಇದನ್ನು ಕೇಳಿ ದವರೇ ಉಕ್ಕುವ ಕಣ್ಣೀರಿದೊಡನೆ, "ನಿಜವಾಗಿಯೂ ನೆಹರುವು ಮಹಾ ಪುರುಷನು. ನಾನಾಗಿದ್ದರೆ ಹೀಗೆ ಮಾಡುತ್ತಿರಲಿಲ್ಲ" ಎಂದು ಹೇಳಿದರಂತೆ. ಇಂತಹ **ವಿಶ್ವಬಂಧುವು** ಭಾರತದ ವಿದೇಶ ಮಂತ್ರಿಯಾಗಿರುವುದು ಭಾರತದ ಹೆಮ್ಮೆ, ಜಗತ್ತಿನ ಭಾಗ್ಯ.

ಹರಿವಂಶಗಾನ